ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

**ಸ್ಥಾಪನೆ : 1916**

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570005

**ಸಂಖ್ಯೆ:ಎಸಿ.6/152/NEP/2020-21** **ದಿನಾಂಕ: 26-10-2021**

## ಅಧಿಸೂಚನೆ

**ವಿಷಯ:-** ಬಿಎ-ಕನ್ನಡ ಪಠ್ಯಕ್ರಮ ಮತ್ತು ಪರೀಕ್ಷಾ ವಿಧಾನವನ್ನು NEP-2020 ಅನುಸಾರ 2021-22ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ತರುವ ಬಗ್ಗೆ.

**ಉಲ್ಲೇಖ:-** 1. ದಿನಾಂಕ: 27-09-2021 ರಂದು ಜರುಗಿದ ಕನ್ನಡ ಅಧ್ಯಯನ ಮಂಡಳಿ ಸಭೆಯ ಶಿಫಾರಸ್ಸು.
2. ದಿನಾಂಕ: 13-10-2021 ರಂದು ಜರುಗಿದ ಕಲಾ ನಿಕಾಯ ಸಭೆಯ ಶಿಫಾರಸ್ಸು.
3. ದಿನಾಂಕ: 22-10-2021 ರಂದು ಜರುಗಿದ ಶಿಕ್ಷಣ ಮಂಡಳಿಯ ನಡಾವಳಿ.

*****

ದಿನಾಂಕ: 27-09-2021 ರಂದು ಜರುಗಿದ ಉಲ್ಲೇಖ (1) ರ ಕನ್ನಡ ಅಧ್ಯಯನ ಮಂಡಳಿ (ಸ್ನಾತಕ) ಬಿ.ಎ. ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮ ಮತ್ತು ಪರೀಕ್ಷಾ ವಿಧಾನವನ್ನು NEP-2020ರ ಅನುಸಾರ ರೂಪಿಸಿ **2021-22ನೇ** ಶೈಕ್ಷಣಿಕ ಸಾಲಿನಿಂದ ಜಾರಿಗೆ ತರಲು ಶಿಫಾರಸ್ಸು ಮಾಡಿರುತ್ತದೆ.

ಉಲ್ಲೇಖಿತ (2 & 3) ರ ದಿನಾಂಕ 13-10-2021 ಮತ್ತು 22-10-2021 ರಂದು ಕ್ರಮವಾಗಿ ನಡೆದ ಕಲಾ ನಿಕಾಯ ಹಾಗೂ ವಿದ್ಯಾ ವಿಷಯಕ ಪರಿಷತ್ ಸಭೆಗಳು ಮೇಲಿನ ಪ್ರಸ್ತಾವನೆಗಳನ್ನು ಅನುಮೋದಿಸಿರುವುದರಿಂದ ಈ ಅಧಿಸೂಚನೆ ಹೊರಡಿಸಲಾಗಿದೆ.

ಕನ್ನಡ ಅಧ್ಯಯನ ಮಂಡಳಿ (ಸ್ನಾತಕ) ಪಠ್ಯಕ್ರಮಗಳು ಮತ್ತು ಪರೀಕ್ಷಾ ವಿಧಾನಗಳನ್ನು **www.uni-mysore.ac.in** ನಿಂದ ಪಡೆಯಬಹುದಾಗಿದೆ.

ಕುಲಸಚಿವರು
ಕುಲಸಚಿವ,
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

**ಗೆ:-**

1. ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಳಪಟ್ಟ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಅಗತ್ಯ ಕ್ರಮಕ್ಕಾಗಿ
2. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಡೀನರು, ಕಲಾ ನಿಕಾಯ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
4. ನಿರ್ದೇಶಕರು/ಅಧ್ಯಕ್ಷರು, ಕುವೆಂಪು ಅಧ್ಯಯನ ಸಂಸ್ಥೆ/ಮಂಡಳಿ, ಮಾನಸಗಂಗೋತ್ರಿ, ಮೈಸೂರು.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ ಕಟ್ಟಡ, ಮಾನಸಗಂಗೋತ್ರಿ, ಮೈಸೂರು.
6. ನಿರ್ದೇಶಕರು, ಪಿ.ಎಂ.ಇ.ಬಿ., ಮಾನಸಗಂಗೋತ್ರಿ, ಮೈಸೂರು.

7. ನಿರ್ದೇಶಕರು. ಐ.ಸಿ.ಡಿ, ಮಾನಸಗಂಗೋತ್ರಿ, ಮೈಸೂರು– ಇವರಿಗೆ ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.
8. ಕುಲಪತಿಗಳು/ ವಿಶೇಷ ಅಧಿಕಾರಿಗಳು/ ಆಪ್ತ ಸಹಾಯಕರು/ ಕುಲಸಚಿವರು/ ಉಪಕುಲಸಚಿವರು/ ಸಹಾಯಕ ಕುಲಸಚಿವರು/ಅಧೀಕ್ಷಕರು, ಆಡಳಿತ ವಿಭಾಗ/ಸಾಮಾನ್ಯ/ಪಿಡಿಐ/ಪ್ರಾಧಿಕಾರ ಮತ್ತು ಪರೀಕ್ಷಾ ವಿಭಾಗ, ಪ್ರಾಧಿಕಾರ/ಪಿಡಿಐ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಾರ್ಯನಿರ್ವಾಹಕರು, ಆಡಳಿತಶಾಖೆಯ, AC2(S)/ AC-3/ AC-7(a)/ AC-9, ಶೈಕ್ಷಣಿಕ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.– ಈ ಸಂಬಂಧ ಮುಂದಿನ ಕ್ರಮವಹಿಸುವಂತೆ ತಿಳಿಸಲಾಗಿದೆ.
10. ರಕ್ಷಾ ಕಡತಕ್ಕೆ.

SVN

# ಮೈಸೂ ವಿದ್ಯಾನಿಲಯ

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ ಸಿದ್ಧಪಡಿಸಿದ
ಸ್ನಾತಕ ಅಧ್ಯಯನ ಮಂಡಳಿಯಲ್ಲಿ ಅನುಮೋದನೆಗೊಂಡಿರುವ ಸ್ನಾತಕ ಪದವಿಗಳ
ಕನ್ನಡ ಭಾಷಾ ಪಠ್ಯ, ಬಿ.ಎ. ಐಚ್ಛಿಕ ಕನ್ನಡ, ಮುಕ್ತ ಆಯ್ಕೆ ಹಾಗೂ ಕಡ್ಡಾಯ ಕನ್ನಡ
ಪಠ್ಯಕ್ರಮ 2021–2022ನೇ ಶೈಕ್ಷಣಿಕ ಸಾಲಿನಿಂದ ಅನ್ವಯ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು 570 006

**ಕನ್ನಡ ಪಠ್ಯಕ್ರಮ ವಿನ್ಯಾಸದ ಆಶಯಗಳು :**

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಅನುಗುಣವಾಗಿ ಕನ್ನಡ ಭಾಷಾ, ಐಚ್ಛಿಕ, ಮುಕ್ತ ಆಯ್ಕೆ ಕನ್ನಡ, ಕನ್ನಡೇತರರಿಗೆ ಕನ್ನಡ ಪಠ್ಯ ಕ್ರಮಗಳ ವಿನ್ಯಾಸವನ್ನು ರೂಪಿಸಲಾಗಿದೆ. ಕರ್ನಾಟಕದಾದ್ಯಂತ ವಿವಿಧ ವಿಶ್ವವಿದ್ಯಾಲಯಗಳು ಈತನಕ ಅರ್ಥಪೂರ್ಣವಾದ ಹಾಗೂ ವೈವಿಧ್ಯಮಯ ಪಠ್ಯಕ್ರಮಗಳನ್ನು ಅನುಸರಿಸುತ್ತಾ ಬಂದಿವೆ. ಸಾಹಿತ್ಯದ ಮೂಲಗುಣವಾದ ನಿತ್ಯನೂತನತೆಗೆ ಅನುಗುಣವಾಗಿ ಹೊಸತನವನ್ನು ತರಲು ಪ್ರಯತ್ನಿಸಲಾಗಿದೆ. ಈಗ ಹೊಸ ಪಠ್ಯಕ್ರಮದ ಪ್ರಕಾರ ಪ್ರಯೋಗಿಸಲ್ಪಟ್ಟು ಯಶಸ್ವಿಯಾಗಿರುವ ಮೈಸೂರು ವಿಶ್ವವಿದ್ಯಾನಿಲಯವು "ವಿಷಯಾಧಾರಿತ ಪಠ್ಯಕ್ರಮ" (Theme Based)ವನ್ನು ಅಳವಡಿಸಲು ಉದ್ಯುಕ್ತವಾಗಿದೆ. ಈ ಮೂಲಕ ಕಲಿಕೆ ಮತ್ತು ಫಲಿತಗಳ ನಡುವಿನ ಸಮತೋಲನವನ್ನು ಸಾಧಿಸುವುದು ಸಾಧ್ಯವಾಗುತ್ತದೆ. ಶಿಕ್ಷಣವು ವಿದ್ಯಾರ್ಥಿಗಳಿಗೆ ಭಾಷಾ ಕೌಶಲ್ಯ, ಸಾಹಿತ್ಯದ ಮಾನವೀಯ ಸಂವೇದನೆ, ಸಮಕಾಲೀನ ವಿದ್ಯಮಾನಗಳ ಅರಿವು, ಸಂಸ್ಕೃತಿಯ ಬೆಳಕು ಮತ್ತು ರಾಷ್ಟ್ರೀಯತೆಯ ಮನೋಭಾವವನ್ನು ಕಟ್ಟಿಕೊಡುವುದರಲ್ಲಿ ಯಶಸ್ವಿಯಾಗಬೇಕು ಎನ್ನುವ ಹೊಸ ಶಿಕ್ಷಣ ನೀತಿಯ ಆಶಯವನ್ನು ವಿಷಯಾಧಾರಿತ ಪಠ್ಯಕ್ರಮದ ಮೂಲಕ ಸಾಧಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಉದಾಹರಣೆಗೆ 'ನಾಡು–ನುಡಿ–ಚಿಂತನೆ'. 'ಸಾಮರಸ್ಯ', 'ಪರಿಸರ ಜಾಗತೀಕರಣ' ಮೊದಲಾದವು ವಿದ್ಯಾರ್ಥಿಗಳಲ್ಲಿ ಉದ್ದೇಶಿತ ಫಲಿತಗಳನ್ನು ನೀಡುತ್ತವೆ. ಹಾಗೆಯೇ ಆಯಾ ಅಧ್ಯಯನ ಶಿಸ್ತುಗಳ ಸ್ವರೂಪಕ್ಕನುಗುಣವಾಗಿ ಒಂದು ಘಟಕವನ್ನು ಸ್ನಾತಕ ಅಧ್ಯಯನ ಮಂಡಳಿಯಲ್ಲಿ ಪರಿಶೀಲಿಸಿ ರೂಪಿಸಿ ಸಿದ್ಧಪಡಿಸಲಾಗಿದೆ.

ಭಾಷಾ ಪಠ್ಯಗಳನ್ನು ನಾಲ್ಕು ಸೆಮಿಸ್ಟರ್‌ಗಳಲ್ಲಿ ಪ್ರಥಮ ಭಾಷೆಯಾಗಿ ಬೋಧಿಸತಕ್ಕದ್ದು, ಪ್ರತಿ ಸೆಮಿಸ್ಟರ್‌ಗೂ 3 ಕ್ರೆಡಿಟ್‌ಗಳು ಹಾಗೂ ನಾಲ್ಕು ಗಂಟೆ ಬೋಧನಾ ಅವಧಿ ಇರುತ್ತದೆ. ಐಚ್ಛಿಕ ಕನ್ನಡ ಪಠ್ಯಕ್ರಮವನ್ನು ಸಿದ್ಧಪಡಿಸಿದ್ದು ಪ್ರತಿ ಸೆಮಿಸ್ಟರ್‌ಗೂ 3 ಕ್ರೆಡಿಟ್‌ಗಳು ಹಾಗೂ 3 ಗಂಟೆ ಬೋಧನಾ ಅವಧಿ ಇರುತ್ತದೆ. ಪ್ರತಿ ಸೆಮಿಸ್ಟ್ಅರ್‌ಗೆ ಕಡ್ಡಾಯ ಕನ್ನಡ (ಕನ್ನಡೇತರರಿಗೆ ಕನ್ನಡ–ಕನ್ನಡ ಕಲಿಕೆ) ಪಠ್ಯಕ್ರಮವನ್ನು ಒಂದು ಸೆಮಿಸ್ಟರ್‌ನಲ್ಲಿ ಬೋಧಿಸುವುದು. ಮುಕ್ತ ಆಯ್ಕೆ ಕನ್ನಡ ಪತ್ರಿಕೆಗೆ (ಕನ್ನಡ ಭಾಷೆ ಮತ್ತು ಐಚ್ಛಿಕ ಕನ್ನಡ) ನಾಲ್ಕು ಪತ್ರಿಕೆಗಳನ್ನು ಸಿದ್ಧಪಡಿಸಲಾಗಿದೆ. ಮುಕ್ತ ಆಯ್ಕೆ ಕನ್ನಡ ಪತ್ರಿಕೆಗಲನ್ನು ಎಲ್ಲ ಅಧ್ಯಯನ ಶಿಸ್ತುಗಳ ವಿದ್ಯಾರ್ಥಿಗಳೂ ನಾಲ್ಕು ಸೆಮಿಸ್ಟರ್‌ಗಳಿಗೂ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ವಿದ್ಯಾರ್ಥಿಗಳಿಗೆ ಕಲಿಕೆಯು ಹೆಚ್ಚು ಪ್ರಾಯೋಗಿಕವಾಗಿರುವಂತೆ 'ಕ್ರಿಯಾ ಪುಸ್ತಕ' (Work Book)ವನ್ನು ರೂಪಿಸಲು ಅವಕಾಶವನ್ನು ಕಲ್ಪಿಸಿ ಕೊಡಲಾಗಿದೆ.

## 1. ಪದವಿ ಕನ್ನಡ ಭಾಷಾ ಪಠ್ಯಗಳು

1) ಕಲಾ ಕನ್ನಡ (ಬಿ.ಎ. 1 ಮತ್ತು 2ನೇ ಸೆಮ್ ಕನ್ನಡ ಪಠ್ಯ), ಸಮಾಜ ಕಾರ್ಯ (ಬಿಎಸ್.ಡಬ್ಲ್ಯೂ ದೃಶ್ಯ ಮತ್ತು ಪ್ರದರ್ಶನ್ಮಾತಕ ಕಲೆಗಳು BPA)
2) ವಿಜ್ಞಾನ ಕನ್ನಡ (ಬಿಎಸ್ಸಿ 1 ಮತ್ತು 2ನೇ ಸೆಮ್ ಕನ್ನಡ ಪಠ್ಯ)
3) ಗಣಕ ಕನ್ನಡ (ಬಿಸಿಎ 1 ಮತ್ತು 2ನೇ ಸೆಮ್ ಕನ್ನಡ ಪಠ್ಯ)

4) ವಾಣಿಜ್ಯ ಕನ್ನಡ (ಬಿಕಾಂ 1 ಮತ್ತು 2ನೇ ಸೆಮ್ ಕನ್ನಡ ಪಠ್ಯ)

5) ವ್ಯವಹಾರ ನಿರ್ವಹಣ ಕನ್ನಡ (ಬಿಬಿಎ 1 ಮತ್ತು 2ನೇ ಸೆಮ್ ಕನ್ನಡ ಪಠ್ಯ)

## Course Articulation Matrix Mapping of Course Outcomes (Cos)

| Course Outcomes (Cos) / Program Outcomes (Pos) | ಬಿ.ಎ., ಬಿ.ಪಿ.ಎ., ಬಿ.ಎಸ್.ಡಬ್ಲ್ಯು. | ಬಿ.ಎಸ್ಸಿ. | ಬಿ.ಕಾಂ. | ಬಿ.ಸಿ.ಎ. | ಬಿ.ಬಿ.ಎ. | ಐಚ್ಛಿಕ ಕನ್ನಡ | ಮುಕ್ತ ಆಯ್ಕೆ ಕನ್ನಡ | ಕಡ್ಡಾಯ ಕನ್ನಡ ಕನ್ನಡೇತರರಿಗೆ ಕನ್ನಡ |
|---|---|---|---|---|---|---|---|---|
| 1. ವಿವಿಧ ಬರಹಗಾರರು, ಸಾಹಿತ್ಯ ಕೃತಿಗಳು ಮತ್ತು ಸಾಹಿತ್ಯ ಚಟುವಳಿಗಳ ಅರಿವು ಹೆಚ್ಚಿಸಿಕೊಳ್ಳುವುದು | | | | | | | | |
| 2. ವಿವಿಧ ಸಾಹಿತ್ಯ ಪ್ರಕಾರಗಳ ರೂಪ ಸ್ವರೂಪಗಳ ಬಗೆಗೆ ತಿಳುವಳಿಕೆ ಪಡೆಯುವುದು | | | | | | | | |
| 3. ಭಾಷೆ–ಸಾಹಿತ್ಯದ ಶ್ರೀಮಂತಿಕೆಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಮೂಡಿಸಿಕೊಳ್ಳುವುದು | | | | | | | | |
| 4. ಸಾಹಿತ್ಯ ಮೂಲಕ ಸಮಾಜೋ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ತಿಳುವಳಿಕೆಯನ್ನು ಹೊಂದುವುದು | | | | | | | | |
| 5. ವೈಚಾರಿಕ–ವೈಜ್ಞಾನಿಕ ಚಿಂತನೆಗಳನ್ನು ಅಳವಡಿಸಿಕೊಳ್ಳುವುದು | | | | | | | | |
| 6. ಭಾಷಾ ಕೌಶಲ್ಯವನ್ನು ಬೆಳೆಸಿಕೊಳ್ಳುವುದು | | | | | | | | |
| 7. ಸಾಹಿತ್ಯದ ಓದು, ತಿಳುವಳಿಕೆ ಹಾಗೂ ಬರವಣಿಗೆಯನ್ನು ರೂಡಿಸಿಕೊಳ್ಳುವುದು | | | | | | | | |
| 8. ನಾಡು–ನುಡಿಯನ್ನು ಕುರಿತ ಅರಿವನ್ನು ಹೆಚ್ಚಿಸಿಕೊಳ್ಳುವುದು | | | | | | | | |
| 9. ಸಮಕಾಲೀನ ವಿದ್ಯಮಾನಗಳ ಅರಿವು | | | | | | | | |
| 10. ಸಾಮಾಜಿಕ ಹೊಣೆಗಾರಿಕೆಯ ಅರಿವು | | | | | | | | |

| | | | | | | | | |
|---|---|---|---|---|---|---|---|---|
| 11. ಸದೃಢ ಬೌದ್ಧಿಕ ವ್ಯಕ್ತಿತ್ವ ನಿರ್ಮಾಣ | | | | | | | | |

with Program Outcomes (Pos 1-12)

**ಆಂತರಿಕ ಮೌಲ್ಯಮಾಪನ ಮತ್ತು ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷಾ ವಿಧಾನದ ಸಲಹೆ ಮತ್ತು ಮಾದರಿ :**

ಈ ಸಮಿತಿಯು ಆಂತರಿಕ (ಸಿಐಇ) ಹಾಗೂ ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷೆ (ಎಸ್ಇಇ)ಗಳ ವಿಧಾನವನ್ನು ಕುರಿತಂತೆ ಈ ಕೆಳಗಿನ ಸಲಹೆ ನೀಡಲು ಬಯಸುತ್ತದೆ. ಪಠ್ಯಚೌಕಟ್ಟು ಸಮಿತಿ ಸೂಚನೆಯಂತೆ ಆಂತರಿಕ (ಸಿಐಇ) ಮೌಲ್ಯಮಾಪನವು ಶೇ. 40 ಅಂಕಗಳನ್ನು ಹಾಗೂ ಸೆಮಿಸ್ಟರ್ ಕೊನೆಯ ಪರೀಕ್ಷೆಯ (ಎಸ್ಇಇ) ಶೇ. 60 ಅಂಕಗಳ ನಿಯಮವನ್ನು ಈ ಕೆಳಗಿನ ಮಾನದಂಡಗಳನ್ನು ಅನುಸರಿಸಿ ಮಾಪನ ಮಾಡಲು ಸೂಚಿಸುತ್ತದೆ.

| ಪರೀಕ್ಷೆ | ಸಮಯ | ಅಂಕಗಳು |
|---|---|---|
| TESTC-1 | ಪ್ರತಿ ಸೆಮಿಸ್ಟರ್‌ನ ಪೂರ್ವಾರ್ಧದ ಕೊನೆಗೆ 7–8ನೇ ವಾರಗಳಲ್ಲಿ | 10 |
| TESTC-2 | ಪ್ರತಿ ಸೆಮಿಸ್ಟರ್‌ನ ಉತ್ತರಾರ್ಧದ ಕೊನೆಗೆ 15–16ನೇ ವಾರಗಳಲ್ಲಿ | 10 |
| C-1 | ನಿಯೋಜಿತ ಪ್ರಬಂಧ, ವಿಚಾರ ಸಂಕಿರಣ (ಮೊದಲ 2 ತಿಂಗಳು) | 05 |
| C-2 | ರಸಪ್ರಶ್ನೆ, ಗುಂಪು ಚರ್ಚೆ, ವಿಚಾರ ಗೋಷ್ಠಿ (ಕೊನೆಯ 2 ತಿಂಗಳು) | 05 |
| C-1 | ವಿಚಾರ ಸಂಕಿರಣ | 05 |
| C-2 | ನಿಯೋಜಿತ ಪ್ರಬಂಧ, ಗುಂಪು ಚರ್ಚೆ, ವಿಚಾರ ಗೋಷ್ಠಿ | 05 |
| | **ಒಟ್ಟು ಅಂಕಗಳು** | 40 |
| C-3 | ಪ್ರತಿ ಸೆಮಿಸ್ಟರ್‌ನ ಅಂತಿಮ ಪರೀಕ್ಷೆ ಸಮಯ 3 ಗಂಟೆಗಳು 60 ಅಂಕಗಳು | 60 |
| | **ಒಟ್ಟು ಅಂಕಗಳು** | **100** |

**ಸೆಮಿಸ್ಟರ್ ಅಂತ್ಯದ ಪರೀಕ್ಷೆ (ಎಸ್ಇಇ) :**

ಈ ವಿಧಾನವು 60 ಅಂಕಗಳ ಲಿಖಿತ ಪರೀಕ್ಷೆಗಳಿಂದ ಕೂಡಿರುತ್ತದೆ. ಈ ಪರೀಕ್ಷೆಯು ಆಯಾ ವಿಶ್ವವಿದ್ಯಾನಿಲಯಗಳೂ ಹಾಗೂ ಅಟಾನಮಸ್ ಕಾಲೇಜುಗಳ ಪರೀಕ್ಷಾ ನಿಯಮಾನುಸಾರ ನಡೆಯುವುದರಿಂದ ವಿಶ್ವವಿದ್ಯಾನಿಲಯಗಳು ನಿಗದಿಪಡಿಸಿರುವ ಪರೀಕ್ಷಾ ಅರ್ಹತೆಗಳನ್ನು ವಿದ್ಯಾರ್ಥಿಯು

ಪರಿಪೂರ್ಣಗೊಳಿಸಬೇಕು. ನಂತರ ಆಯಾ ವಿಶ್ವವಿದ್ಯಾನಿಲಯಗಳ ಬಿಒಎಸ್ ಗಳು, ಬಿಬಿಇ ಸದಸ್ಯರು ರೂಪಿಸುವ ಮಾನದಂಡಗಳಂತೆ ಪರೀಕ್ಷೆ ನಡೆಯಲಿದೆ.

**ಅ. ಭಾಷಾ ಕನ್ನಡ ಪತ್ಯ ಚೌಕಟ್ಟು :**

**ಬಿ.ಎ. ಬಿ.ಪಿ.ಎ., ಬಿ.ಎಸ್.ಡಬ್ಲ್ಯು.–ಕನ್ನಡ ಭಾಷಾ ಪತ್ಯ**

ಪತ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು 1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52–56 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್<br>L, 1-1 | ಕನ್ನಡ ನಾಡು–ನುಡಿ–ಚಿಂತನೆ<br>15 ಗಂಟೆಗಳು | ಪ್ರಕೃತಿ<br>15 ಗಂಟೆಗಳು | ಬಾಲ್ಯ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |
| ಎರಡನೇ ಸೆಮಿಸ್ಟರ್<br>L, 1-2 | ಜಾಗತೀಕರಣ<br>15 ಗಂಟೆಗಳು | ಸಮಾಜ<br>15 ಗಂಟೆಗಳು | ಪ್ರೀತಿ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |

**ಬಿ.ಎಸ್ಸಿ.–ಕನ್ನಡ ಭಾಷಾ ಪತ್ಯ**

ಪತ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು 1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52–56 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್<br>L,1-1 | ಕನ್ನಡ ನಾಡು–ನುಡಿ–ಚಿಂತನೆ<br>15 ಗಂಟೆಗಳು | ಭೂಮಿ<br>15 ಗಂಟೆಗಳು | ವೈಜ್ಞಾನಿಕ ಮನೋಧರ್ಮ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |
| ಎರಡನೇ ಸೆಮಿಸ್ಟರ್<br>L,1-2 | ಜೀವನಕಲೆ<br>15 ಗಂಟೆಗಳು | ಕನಸು<br>15 ಗಂಟೆಗಳು | ಮಳೆ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |

**ಬಿ.ಸಿ.ಎ.–ಕನ್ನಡ ಭಾಷಾ ಪತ್ಯ**

ಪತ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು 1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L,1-1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಆಕಾಶ 15 ಗಂಟೆಗಳು | ತಾರುಣ್ಯ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L,1-2 | ವಾಣಿಜ್ಯ 15 ಗಂಟೆಗಳು | ತಂತ್ರಜ್ಞಾನ 15 ಗಂಟೆಗಳು | ದಾಂಪತ್ಯ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

**ಬಿ.ಕಾಂ.–ಕನ್ನಡ ಭಾಷಾ ಪಠ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು 1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52–56 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L,1-1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಸಂಸ್ಕೃತಿ 15 ಗಂಟೆಗಳು | ಜಾಗತೀಕರಣ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L,1-2 | ಸೌಂದರ್ಯ 15 ಗಂಟೆಗಳು | ಭಕ್ತಿ 15 ಗಂಟೆಗಳು | ದೇಸಿಯತೆ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

**ಬಿ.ಬಿ.ಎ.–ಕನ್ನಡ ಭಾಷಾ ಪಠ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು 1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52–56 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L,1-1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಆಧುನಿಕತೆ 15 ಗಂಟೆಗಳು | ಕುಟುಂಬ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L,1-2 | ಕಾಯಕ 15 ಗಂಟೆಗಳು | ಸಾಮರಸ್ಯ 15 ಗಂಟೆಗಳು | ಅಂತಃಕರಣ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

**ಐಚ್ಛಿಕ ಕನ್ನಡ ಪಠ್ಯ ವಿನ್ಯಾಸ**

**ಒಂದರಿಂದ ಎರಡನೇ ಸೆಮಿಸ್ಟರ್‌ವರೆಗೆ**

| | | |
|---|---|---|
| ಮೊದಲನೇ | A–1 | ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ |

| | | |
|---|---|---|
| ಸೆಮಿಸ್ಟರ್ | ಪತ್ರಿಕೆ–1 | (ಆರಂಭದಿಂದ ಹತ್ತನೇ ಶತಮಾನದವರೆಗೆ)<br>ಕ್ರೆಡಿಟ್–03 ಬೋಧನಾ ಅವಧಿ – 3 ಗಂಟೆಗಳು |
| | A–2<br>ಪತ್ರಿಕೆ–2 | ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆ<br>(ಹನ್ನೊಂದನೇ ಶತಮಾನದಿಂದ ಹದಿನಾರನೇ ಶತಮಾನದವರೆಗೆ)<br>ಕ್ರೆಡಿಟ್–03 ಬೋಧನಾ ಅವಧಿ – 3 ಗಂಟೆಗಳು |
| ಎರಡನೇ ಸೆಮಿಸ್ಟರ್ | A–3<br>ಪತ್ರಿಕೆ–3<br>ಕ್ರೆಡಿಟ್–03 | ಆಧುನಿಕಪೂರ್ವ ಕನ್ನಡ ಸಾಹಿತ್ಯ ಚರಿತ್ರೆ<br>(ಹದಿನೇಳನೆಯ ಶತಮಾನದಿಂದ ಹತ್ತೊಂಬನತ್ತನೆ ಶತಮಾನದವರೆಗೆ) |
| | A–4<br>ಪತ್ರಿಕೆ–4<br>ಕ್ರೆಡಿಟ್–03 | ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ<br>(ಇಪ್ಪತ್ತನೆಯ ಶತಮಾನದಿಂದ ಮುಂದೆ) |

**ಮುಕ್ತ ಆಯ್ಕೆ 1 ಮತ್ತು ಮುಕ್ತ ಆಯ್ಕೆ 2 ಪತ್ರಿಕೆಯ ಕನ್ನಡ ಪಠ್ಯ ಚೌಕಟ್ಟು (OE)**

| | | |
|---|---|---|
| ಮೊದಲನೇ ಸೆಮಿಸ್ಟರ್ ಮುಕ್ತ ಆಯ್ಕೆ 1 | OE-1 ಕ್ರೆಡಿಟ್–03 | ಕನ್ನಡ ವ್ಯಾಕರಣ |
| ಎರಡನೇ ಸೆಮಿಸ್ಟರ್ ಮುಕ್ತ ಆಯ್ಕೆ 1 | OE-2 ಕ್ರೆಡಿಟ್–03 | ಆಡಳಿತಾತ್ಮಕ ಕನ್ನಡ ಕಲಿಕೆ |
| ಮೊದಲನೇ ಸೆಮಿಸ್ಟರ್ ಮುಕ್ತ ಆಯ್ಕೆ 2 | OE-1 ಕ್ರೆಡಿಟ್–03 | ಆಧುನಿಕ ಪೂರ್ವ ಕನ್ನಡ ಸಾಹಿತ್ಯ ಪರಿಚಯ |
| ಎರಡನೇ ಸೆಮಿಸ್ಟರ್ ಮುಕ್ತ ಆಯ್ಕೆ 2 | OE-2 ಕ್ರೆಡಿಟ್–03 | ಆಧುನಿಕ ಕನ್ನಡ ಸಾಹಿತ್ಯ ಪರಿಚಯ |
| ಮೂರನೇ ಸೆಮಿಸ್ಟರ್ | OE-3 ಕ್ರೆಡಿಟ್–03 | ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮ ಪರಿಚಯ |
| ನಾಲ್ಕನೇ ಸೆಮಿಸ್ಟರ್ | OE-4 ಕ್ರೆಡಿಟ್–03 | ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮ ಪರಿಚಯ |

**ಕನ್ನಡೇತರರಿಗೆ ಕನ್ನಡ**

ಕನ್ನಡ ಕಲಿ–1 ಪದವಿ ಮೊದಲ ಸೆಮಿಸ್ಟರ್

ಕನ್ನಡ ಕಲಿ–2 ಪದವಿ ಎರಡನೇ ಸೆಮಿಸ್ಟರ್

(ಕನ್ನಡ ಕಲಿ ಪಠ್ಯ ಪುಸ್ತಕವು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದ್ದು ಇದರಲ್ಲಿನ ಮೊದಲ ಹತ್ತು ಭಾಗವನ್ನು ಮೊದಲ ಸೆಮಿಸ್ಟರ್‌ಗೂ ನಂತರದ ಹತ್ತು ಭಾಗವನ್ನು ಎರಡನೇ ಸೆಮಿಸ್ಟರ್‌ಗೂ ಬೋಧಿಸುವುದು, ಆದಾಗ್ಯೂ ಆಯಾ ಅಧ್ಯಯನ ಮಂಡಳಿಗಳು ತಮ್ಮ ಆದ್ಯತೆಗೆ ಅನುಗುಣವಾಗಿ ರೂಪಿಸಿಕೊಳ್ಳಬಹುದು)

**ಐಚ್ಛಿಕ ಕನ್ನಡ ಡಿ.ಎಸ್.ಇ. (DSE) ಮತ್ತು ಒಕೇಷನಲ್ ಕೋರ್ಸ್**

ಐದನೆಯ ಸೆಮಿಸ್ಟರ್‌ನಿಂದ ಪ್ರಾರಂಭ

| | | |
|---|---|---|
| ಐದನೇ ಸೆಮಿಸ್ಟರ್ | DSE-A-1<br>ಕ್ರೆಡಿಟ್–03 | ವಿಶೇಷ ಕವಿ ಅಧ್ಯಯನ<br>ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದಿಂದ ತಲಾ ಒಬ್ಬ ಕವಿ / ಕವಯತ್ರಿ ಅಧ್ಯಯನ |

| | | |
|---|---|---|
| ಆರನೇ ಸೆಮಿಸ್ಟರ್ | DSE-A-2<br>ಕ್ರೆಡಿಟ್–03 | ಕನ್ನಡ ಮತ್ತು ಸಮೂಹ ಮಾಧ್ಯಮ ಸಂಹವನ ಸಾಹಿತ್ಯ |
| ಏಳನೇ ಸೆಮಿಸ್ಟರ್ | DSE-A-3<br>ಕ್ರೆಡಿಟ್–03 | ವಿಶೇಷ ಕವಿ ಅಧ್ಯಯನ<br>ಆಧುನಿಕ ಕನ್ನಡ ಸಾಹಿತ್ಯ ಒಬ್ಬ ಲೇಖಕ / ಲೇಖಕಿಯ ಅಧ್ಯಯನ |
| | DSE-A-4<br>ಕ್ರೆಡಿಟ್–03 | ಭಾಷಾಂತರ |
| | ಕ್ರೆಡಿಟ್–03 | ಸಂಶೋಧನಾ ವಿಧಿವಿಧಾನಗಳು |
| ಎಂಟನೇ ಸೆಮಿಸ್ಟರ್ | DSE-A-4<br>ಕ್ರೆಡಿಟ್–03 | ವಿಮರ್ಶಾ ವೈಧಾನಿಕತೆ |
| | ಕ್ರೆಡಿಟ್–06 | ಸಂಶೋಧನಾ ಪ್ರಬಂಧ ರಚನೆ |

**ಮೈನರ್ ಆಯ್ಕೆ ಪತ್ರಿಕೆ**

| | | |
|---|---|---|
| ಐದನೇ ಸೆಮಿಸ್ಟರ್ | DSE-B-9<br>ಕ್ರೆಡಿಟ್–04 | ಕಾವ್ಯ ಮತ್ತು ನಾಟಕ<br>ಹೊಸಗನ್ನಡದ ಪ್ರಾತಿನಿಧಿಕ ಹತ್ತು ಕವಿತೆಗಳು ಮತ್ತು ಸರ್ವರಿಗೂ ಸಂವಿಧಾನ ನಾಟಕದ ಭಾಗ |
| ಆರನೇ ಸೆಮಿಸ್ಟರ್ | DSE-B-10<br>ಕ್ರೆಡಿಟ್–04 | ಕಥೆ ಮತ್ತು ಕಾದಂಬರಿ<br>ಐದು ಪ್ರಾತಿನಿಧಿಕ ಕಥೆ ಮತ್ತು ಕಾದಂಬರಿ |

## ಅನುಬಂಧ

## ರಾಷ್ಟ್ರೀಯ ಶಿಕ್ಷಣ ನೀತಿ–2020

## ಕನ್ನಡ ಭಾಷಾ ಪಠ್ಯ ಸ್ವರೂಪ (ಪ್ರಥಮ ಭಾಷೆ–ಕಡ್ಡಾಯ ಕನ್ನಡ)

**ಕೋರ್ಸ್‌ವಾರು ಕನ್ನಡ ಭಾಷಾ ಪಠ್ಯಕ್ರಮ :**

ಶೈಕ್ಷಣಿಕ ವ್ಯವಸ್ಥೆಯಲ್ಲಿ ಭಾಷಾ ಪಠ್ಯಗಳು ಮತ್ತು ಭಾಷಾ ಅಧ್ಯಾಪಕರ ಜವಾಬ್ದಾರಿ ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಹಲವು ಬಗೆಯ ಬಿಕ್ಕಟ್ಟುಗಳು ಮತ್ತು ವಿಷಮತೆಗಳು ಹೆಚ್ಚುತ್ತಿರುವ ಈ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳನ್ನು ಪ್ರಜ್ಞಾವಂತರನ್ನಾಗಿ, ಸಂವೇದನಾಶೀಲರನ್ನಾಗಿ ಮಾಡುವ ಅವಕಾಶ ಭಾಷಾ ಪಠ್ಯಗಳಲ್ಲಿ ಇರುತ್ತದೆ. ಆ ಅವಕಾಶವನ್ನು ಎಂದಿನಿಂದಲೂ ಭಾಷಾ ಪಠ್ಯ ಮಂಡಳಿಗಳು ಆಸ್ಥೆಯಿಂದ ನಿಭಾಯಿಸುತ್ತಲೇ ಬಂದಿವೆ.

ಹೊಸ ಶಿಕ್ಷಣ ನೀತಿಯ ಅನುಷ್ಠಾನದ ಹಿನ್ನೆಲೆಯಲ್ಲಿ ರಚಿಸಲಾದ ಸಮಿತಿಯು ಇದನ್ನೇ ಬುನಾದಿಯಾಗಿಸಿಕೊಂಡು ಪಠ್ಯಕ್ರಮವನ್ನು ಕುರಿತ ನಕಾಶೆಯನ್ನು ರಚಿಸಿದೆ. ಕನ್ನಡವನ್ನು 'ಜ್ಞಾನದ ಭಾಷೆ'ಯಾಗಿ ವಿದ್ಯಾರ್ಥಿಗಳಿಗೆ ನೀಡಬೇಕೆನ್ನುವುದು ಸಮಿತಿಯ ಆಶಯ. ಹೊಸ ರಾಷ್ಟ್ರೀಯ ಶಿಕ್ಷಣ

ನೀತಿಯು ಈ ಅಂಶವನ್ನೇ ಉದ್ಯೋಗ ಮತ್ತು ಕೌಶಲ್ಯಗಳು ಶಿಕ್ಷಣದ ಮುಖ್ಯ ಗುರಿ ಎಂದು ಹೇಳಿದೆ. ಹೀಗಾಗಿ ತಾಯಿ ಭಾಷೆ ಕನ್ನಡದ ಮೂಲಕ ವಿದ್ಯಾರ್ಥಿಗಳು ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತೀಯ ಸವಾಲುಗಳನ್ನು ಸನ್ನದ್ಧರಾಗುವ ಬಗೆಯಲ್ಲಿ ಪಠ್ಯಕ್ರಮದ ವಿನ್ಯಾಸವನ್ನು ರೂಪಿಸಲಾಗಿದೆ. ಜಾಗತೀಕರಣವೂ ಸೇರಿದಂತೆ ಹಲವು ವಿದ್ಯಮಾನಗಳು ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳನ್ನು ಸಮೀಕರಣಗಳನ್ನು, ಗ್ರಹಿಕೆಗಳನ್ನು ಆಳವಾಗಿ ಪ್ರಭಾವಿಸುತ್ತಿವೆ. ಇವು ನಮ್ಮ ಯುವ ತಲೆಮಾರುಗಳನ್ನು ತಮ್ಮ ಬೇರುಗಳಿಂದಲೇ ದೂರ ಮಾಡುತ್ತಾ ಅವರನ್ನು ಪರಕೀಯರನ್ನಾಗಿಸುತ್ತಿದೆ ಎನ್ನುವ ಆತಂಕ ಅಧ್ಯಾಪಕರನ್ನು ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ನಾಡು-ನುಡಿ, ಜಲ, ಭೂಮಿ, ಸಮಕಾಲೀನ ಸವಾಲುಗಳನ್ನು ಕನ್ನಡದ ಅತ್ಯುತ್ತಮ ಪಠ್ಯಗಳ ಮುಖಾಂತರ ಕಲಿಸಬಹುದೆನ್ನುವ ನಂಬಿಕೆ ಈ ಸಮಿತಿಯದ್ದು. ವಿದ್ಯಾರ್ಥಿಗಳಲ್ಲಿ ಸಾಹಿತ್ಯಕ ಅಭಿರುಚಿಯನ್ನು ಹೆಚ್ಚಿಸಬೇಕು, ಭಾಷೆ ಮತ್ತು ಸಾಹಿತ್ಯಗಳನ್ನು ಕುರಿತ ಪ್ರೀತಿಯನ್ನು ಹೆಚ್ಚಿಸಬೇಕು ಎನ್ನುವುದು ಪಠ್ಯಗಳ ಒಂದು ಆಯಾಮವಾದರೆ, ಮತ್ತೊಂದು ಆಯಾಮವು ನಮ್ಮ ಸಮೃದ್ಧ ಸಾಂಸ್ಕೃತಿಕ, ಸಾಹಿತ್ಯಕ ಪರಂಪರೆಯ ಅರಿವೂ ಅವರಲ್ಲಿ ಮೂಡಬೇಕೆನ್ನುವುದು. ಎರಡು ವರ್ಷಗಳ ಪಠ್ಯಗಳ್ಲಲಿ ಅವರಲ್ಲಿ ನಾಗರಿಕ ವ್ಯಕ್ತಿತ್ವದ ಧಾತುಗಳನ್ನು ತುಂಬಬೇಕು. ಸಾಹಿತ್ಯದ ಅಂತಃಕರಣ ಮತ್ತು ಸಾಮಾಜಿಕ ವ್ಯಕ್ತಿತ್ವದ ಬೌದ್ಧಿಕ ಅರಿವು ಅವರಲ್ಲಿ ಸಮನಾಗಿ ಬೆಳೆಯುತ್ತಾ ಹೋಗಬೇಕು. ಇವುಗಳಲ್ಲದೆ ಕನ್ನಡವು ಅವರ ವೃತ್ತಿಯ ದಾರಿಯೂ ಆಗಬೇಕು. ಹಲವು ವೃತ್ತಿಗಳನ್ನು ಅವರು ಅರಿಸಿಕೊಳ್ಳಲು ಅನುವಾಗುವ ಪಠ್ಯಕ್ರಮವೂ ಸೇರಬೇಕು. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಮಿತಿಯು 'ವಿಷಯಾಧಾರಿತ ಪಠ್ಯ'ವನ್ನು ರೂಪಿಸಿದೆ.

ಯಾವುದೇ ಕೋರ್ಸಿನ ಮೊದಲ ಸೆಮಿಸ್ಟರ್‌ನ ಮೊದಲ ಭಾಗವಾಗಿ (ನಾಲ್ಕು ಭಾಗಗಳಲ್ಲಿ) ಕನ್ನಡ ನಾಡು-ನುಡಿಯನ್ನು ಕುರಿತ ಭಾಗವು ಕಡ್ಡಾಯವಾಗಿ ಇರಬೇಕು. ಕನ್ನಡನಾಡು ರೂಪುಗೊಂಡದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯತೆ, ಅದರ ಲೋಕದೃಷ್ಟಿ, ಕಲಾ ಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸ್ವೋಪಜ್ಞತೆ, ಅದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಆಯಾ ವಿಶ್ವವಿದ್ಯಾನಿಲಯಗಳ ಅಧ್ಯಯನ ಮಂಡಳಿಗಳು ಪಠ್ಯಕ್ರಮವನ್ನು ರೂಪಿಸಿಕೊಳ್ಳಬಹುದಾಗಿದೆ. ನಾಲ್ಕರಲ್ಲಿ ಕೊನೆಯ ಭಾಗವನ್ನು ಕಡ್ಡಾಯವಾಗಿ ಸಂಕೀರ್ಣ/ ತಾಂತ್ರಿಕ/ ವೃತ್ತಿ ತರಬೇತಿ ಆಶಯದ / ವೃತ್ತಿ ನೈಪುಣ್ಯತೆ / ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾದ... ಹೀಗೆ ಇದು ಅಯಾ ವಿಶ್ವವಿದ್ಯಾನಿಲಯಗಳ ಅಧ್ಯಯನ ಮಂಡಳಿಗಳ ತೀರ್ಮಾನಕ್ಕೆ ಬಿಡಲಾಗಿದೆ.

ಇದಕ್ಕೆ ಪೂರಕವಾಗಿ ಹಲವು ವಿಷಯಗಳನ್ನು ಸಮಿತಿಯು ಆಯ್ಕೆ ಮಾಡಿದೆ. ಸದ್ಯಕ್ಕೆ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ಗಳಿಗೆ ಇವುಗಳನ್ನು ಸ್ಥೂಲವಾಗಿ ಆರಿಸಲಾಗಿದ್ದು, ಆಯಾ ಘಟಕಗಳ ಆಶಯಕ್ಕೆ ಅನುಗುಣವಾಗಿ ಅಧ್ಯಯನ ಮಂಡಳಿಗಳು ಪಠ್ಯಗಳನ್ನು ಬೇರೆ ಬೇರೆ ಮೂಲಗಳಿಂದ ಮತ್ತು ಇಲ್ಲದೆ ಇರುವ ಹೊಸ ಆಯಾಮಗಳನ್ನು ಸೇರಿಸಿಕೊಳ್ಳಬಹುದು. ಕನ್ನಡೇತರರಿಗೆ ಕನ್ನಡ ಕಲಿ ಪತ್ರಿಕೆಗಳನ್ನು ಕನ್ನಡ ಅಧ್ಯಾಪಕರೇ ಬೋಧಿಸಬೇಕು.

ಮುಂದಿನ ದಿನಗಳಲ್ಲಿ ಮೂರು ಮತ್ತು ನಾಲ್ಕನೇಯ ಸೆಮಿಸ್ಟರ್‌ನ ಪಠ್ಯಗಳ ರೂಪುರೇಷೆಗಳನ್ನು ತಿಳಿಸಲಾಗುವುದು.

**ಪಠ್ಯಕ್ರಮಗಳನ್ನು ಕುರಿತು ಕೆಲವು ಸಲಹೆ ಸೂಚನೆಗಳು :**

1. ಪ್ರತಿ ಪದವಿ ಕ್ರಮಕ್ಕೂ (Stream wise) ಪ್ರತ್ಯೇಕ ಪಠ್ಯಗಳನ್ನು ರೂಪಿಸಬೇಕು.
2. ಪ್ರತಿ ಸೆಮಿಸ್ಟರ್‌ಗೆ ನಾಲ್ಕು ಗಂಟೆಗಳ ಬೋಧನಾ ಅವಧಿ ಕಡ್ಡಾಯವಾಗಿರಬೇಕು.
3. ಪಠ್ಯಗಳ ಆಶಯಗಳನ್ನು ಕುರಿತ ಆರಂಭಿಕ ಟಿಪ್ಪಣಿ ಇರಬೇಕು.
4. ಎರಡು ಸೆಮಿಸ್ಟರ್‌ಗಳನ್ನು ಸೇರಿಸಿ ಒಂದೊಂದು ಪಠ್ಯಪುಸ್ತಕವನ್ನು ಮಾಡುವುದು.
5. ಪ್ರತಿ ಸೆಮಿಸ್ಟರ್‌ನ ಪಠ್ಯಕ್ರಮದಲ್ಲಿ ನಾಲ್ಕು ಘಟಕಗಳು ಹಾಗೂ ಪ್ರತಿ ಘಟಕದಲ್ಲಿ ಮೂರು ಮೂರು ಅಧ್ಯಾಯಗಳು ಇರಬೇಕು.
6. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳು (ಅನುವಾದ, ಜಾನಪದ, ಮಹಿಳಾ ಮತ್ತು ಅಲಕ್ಷಿತ ಸಮುದಾಯ, ಅಲ್ಪಸಂಖ್ಯಾತ ವರ್ಗಗಳು) ಸೇರಿದಂತೆ ಒಳಗೊಳ್ಳುವಂತೆ ಅಧ್ಯಯನ ಮಂಡಳಿಯು ಕಾಳಜಿ ವಹಿಸಬೇಕು.
7. ಕಡ್ಡಾಯ ಕನ್ನಡ ಭಾಷಾ ಪಠ್ಯಕ್ರಮ ವಿನ್ಯಾಸದಲ್ಲಿ ನಾಲ್ಕನೆಯ ಘಟಕದಲ್ಲಿ (ಸಂಕೀರ್ಣ) ಶೀರ್ಷಿಕೆಯನ್ನೂ ಒಳಗೊಂಡಂತೆ ಪಠ್ಯಕ್ರಮವನ್ನು ರೂಪಿಸುವುದನ್ನು ಅಧ್ಯಯನ ಮಂಡಳಿಗಳ ತೀರ್ಮಾನಕ್ಕೆ ಬಿಡಲಾಗಿದೆ. ವೃತ್ತಿಪರ, ತಾಂತ್ರಿಕ ತರಬೇತಿ, ಕೌಶಲ್ಯಾಧಾರಿತ ಮತ್ತು ಸೃಜನಶೀಲ ಚಟುವಟಿಕೆ ಹೀಗೆ ಆಯಾ ಪದವಿ ಕ್ರಮ (Stream wise)ಗಳಿಗೆ ಪೂರಕವಾಗುವಂತೆ ಪಠ್ಯಕ್ರಮವನ್ನು ರೂಪಿಸಬೇಕು.
8. ವಿದ್ಯಾರ್ಥಿಗಳ ಸೃಜನಶೀಲತೆ, ಭಾಷಾ ನೈಪುಣ್ಯ, ಬರೆಹಕೌಶಲ್ಯ, ವಿಶ್ಲೇಷಣಾ ಸಾಮರ್ಥ್ಯ, ಸಮಕಾಲೀನಗೊಳಿಸುವಿಕೆ ಮತ್ತು ಅನುವಾದ ಸಾಮರ್ಥ್ಯಗಳನ್ನು ಹೆಚ್ಚಿಸುವುದನ್ನು ಗಮನದಲ್ಲಿಟ್ಟುಕೊಂಡು ನಿಯೋಜಿ ಕಾರ್ಯ, ಸಾಹಿತ್ಯಕ ಕಾರ್ಯಕ್ರಮ ಇತ್ಯಾದಿಗಳನ್ನು ಆಯೋಜಿಸಬೇಕು.

9. ಪಠ್ಯ ಮತ್ತು ಪಠ್ಯೇತರ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ವೃತ್ತಿಪರ ತಿಳುವಳಿಕೆಯನ್ನು ನೀಡುವುದರ ಜೊತೆಗೆ ಅವರ ಸಮಗ್ರ ವ್ಯಕ್ತಿತ್ವವನ್ನು ವೃತ್ತಿಪರವಾಗಿ ಸಜ್ಜುಗೊಳಿಸಲು ಅನುಕೂಲವಾಗುವಂತೆ ಇರಬೇಕು. ಇದನ್ನು ಅಧ್ಯಯನ ಮಂಡಳಿ ಹಾಗೂ ಬೋಧಕರು ಗಮನದಲ್ಲಿಟ್ಟುಕೊಳ್ಳಬೇಕು.

10. ಪೂರಕ ಪಠ್ಯಗಳಾಗಿ ದೃಶ್ಯ ಹಾಗೂ ಶ್ರವ್ಯ ಮಾಧ್ಯಮಗಳನ್ನು ಅವಶ್ಯವಾಗಿ ಬಳಸಿಕೊಳ್ಳಬೇಕು.

11. ಶಿಕ್ಷಣ ಸಂಸ್ಥೆಗಳಲ್ಲಿ ಭಾಷಾ ಪ್ರಯೋಗಾಲಯ (Language Lab) ಇರುವುದು ಅಪೇಕ್ಷಣೀಯ. ಇದರ ಮೂಲಕ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕಲಿಕೆಯೂ ಸೇರಿದಂತೆ ಇತರ ತಾಂತ್ರಿಕ ಕಲಿಕೆಗಳನ್ನು ತಿಳಿಸಿಕೊಡಬಹುದು. (ಕನ್ನಡದಲ್ಲಿ ವರದಿ ಬರೆಯುವುದು, ಅನುವಾದ ಮಾಡುವುದು ಇತ್ಯಾದಿ)

12. ಭಾಷಾ ಪಠ್ಯ ವಿನ್ಯಾಸದಲ್ಲಿ ನೀಡಲಾಗಿರುವ ಪರಾಮರ್ಶನ ಪಠ್ಯಗಳು ಅಚಿತಿಮವಲ್ಲ. ಅವು ಪ್ರಾತಿನಿಧಿಕ ಮತ್ತು ಮಾದರಿ ಮಾತ್ರ ಅಂತಿಮವಾಗಿ ಆಯ್ಕೆಯು ಆಯಾ ಅಧ್ಯಯನ ಮಂಡಳಿಗಳ ವಿವೇಚನಾಧಿಕಾರಕ್ಕೆ ಬಿಟ್ಟದ್ದು.

13. ಪ್ರತಿ ಪಠ್ಯದಲ್ಲೂ ಪ್ರತಿ ಘಟಕದ ವಿಷಯ (Theme)ವನ್ನು ಕುರಿತ ಟಿಪ್ಪಣಿ ಇರಬೇಕು.

14. ಪಠ್ಯದ ಕೊನೆಯಲ್ಲಿ ಪೂರಕ ಪಠ್ಯಗಳ ಪಟ್ಟಿಯನ್ನು ಕೊಡಬೇಕು. ಪೂರಕ ಪಠ್ಯವನ್ನೂ ನೀಡಬಹುದು. ಪಠ್ಯದ ಮೊದಲು ಆಶಯ ಪಠ್ಯವನ್ನೂ ಸೇರಿಸಬಹುದು.

15. ಭಾಷಾಭ್ಯಾಸದಲ್ಲಿ ವಿದ್ಯಾರ್ಥಿಗಳ ಸ್ವಂತಿಕೆಗೆ ಅವಕಾಶ ಇರಬೇಕು.

16. ಮುಕ್ತ ಆಯ್ಕೆ (ಓಪನ್ ಇಲೆಕ್ಟಿವ್ಸ್) ಪತ್ರಿಕೆಗಳನ್ನು ವಿದ್ಯಾರ್ಥಿಗಳ ವೃತ್ತಿಪರತೆಯನ್ನು ಹೆಚ್ಚಿಸುವ ಸಲುವಾಗಿ ರೂಪಿಸಲಾಗಿದ್ದು, ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೂ ಈ ವಿಷಯಗಳ ಮಹತ್ವವನ್ನು ಕುರಿತು ಮನವರಿಕೆ ಮಾಡಿಕೊಡಬೇಕು.

17. ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾನಿಲಯದ ಅಧ್ಯಯನ ಮಂಡಳಿ ನಿರ್ಧರಿಸುವುದು–1,2,3,4 ಸೆಮಿಸ್ಟರ್‌ಗಳು.

**ಬಿ.ಎ., ಬಿ.ಪಿ.ಎ., ಬಿ.ಎಸ್.ಡಬ್ಲ್ಯೂ–ಕನ್ನಡ ಭಾಷಾ ಪಠ್ಯ**

**ಸೆಮಿಸ್ಟರ್–1**

| | |
|---|---|
| Course Title | ಬಿ.ಎ., ಬಿ.ಪಿ.ಎ., ಬಿ.ಎಸ್.ಡಬ್ಲ್ಯೂ–**ಕನ್ನಡ ಭಾಷಾ ಪಠ್ಯ** |
| Total Contact Hourse : 52 to 56 | Course Credits : 03 |
| Formative Assessment Marks : 40 (CIE) | Duratin of ESA/Exam : 3 hours |
| Model Syllabus Authors : Multiple Authors | Summative Assessment Marks : 60 (SEE) |
| | |
| ವಿವರಗಳು | ಬೋಧನಾ ಅವಧಿ |
| ಘಟಕ–1 ಕನ್ನಡ ನಾಡು–ನುಡಿ–ಚಿಂತನೆ | 13/14 |
| ಘಟಕ–2 ಪ್ರಕೃತಿ | 13/14 |
| ಘಟಕ–3 ಬಾಲ್ಯ | 13/14 |
| ಘಟಕ–4 ಸಂಕೀರ್ಣ | 13/14 |

**ಘಟಕ –1 ಕನ್ನಡ ನಾಡು–ನುಡಿ–ಚಿಂತನೆ :**

ಕಲಾ ಕನ್ನಡ ಪಠ್ಯವನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಅನುಗುಣವಾಗಿ ರೂಪಿಸಲಾಗಿದೆ. ಇಲ್ಲಿಯ ಮುಖ್ಯ ವಿಷಯಾಧಾರಿತ ಪಠ್ಯಕ್ರಮ. ಈ ಮೂಲಕ ಕಲಾ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಕೌಶಲ್ಯವನ್ನು ಕಲಿಸುವುದರ ಜೊತೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಪರಿಚಯಿಸುವುದು ಮುಖ್ಯ ಆಶಯವಾಗಿದೆ.

ಕನ್ನಡ ಭಾಷಾ ಕಲಿಕೆಯ ನಾಲ್ಕು ಆಯಾಮಗಳಾದ ಓದುವುದು, ಬರೆಯುವುದು, ಅರ್ಥ ಮಾಡಿಕೊಳ್ಳುವುದು, ಮಾತಾಡುವುದು ಇವುಗಳನ್ನು ಸಮರ್ಪಕವಾಗಿ ಕಲಿಸುವ ಪಠ್ಯದೊಂದಿಗೆ ಅಭ್ಯಾಸಗಳನ್ನು ರೂಪಿಸಲಾಗಿದೆ.

ವಿದ್ಯಾರ್ಥಿಗಳಲ್ಲಿ ಹೊಸ ಆಲೋಚನಾ ಕ್ರಮಗಳನ್ನು ರೂಪಿಸುವುದು, ವೈಚಾರಿಕ ಮನೋಭಾವನ್ನು ಬೆಳೆಸುವುದು, ಪ್ರಾಯೋಗಿಕ ಚಿಂತನೆಗೆ ಒತ್ತು ಕೊಡುವುದು ಒಟ್ಟಾರೆಯಾಗಿ ಯುವ ಜನಾಂಗದ ಮನಸ್ಸನ್ನು, ವ್ಯಕ್ತಿತ್ವವನ್ನು ರೂಪಿಸುವುದು ಈ ಪಠ್ಯದ ಉದ್ದೇಶ. ಅದರೊಂದಿಗೆ ಕಲಾ ವಿದ್ಯಾರ್ಥಿಗಳು ಸೃಜನಶೀಲ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಅಗತ್ಯವಾದ ಕೌಶಲ್ಯಾಧಾರಿತ ಪಠ್ಯ ಇದಾಗಿದೆ. ಇದಕ್ಕೆ ಪೂರಕವಾಗಿ ಪಠ್ಯವನ್ನು ವಿಷಯಾಧಾರಿತವಾಗಿ ರೂಪಿಸಲಾಗಿದೆ. ಈ ಮೂಲಕ ಬದುಕನ್ನು ಕುರಿತು ಸಮಗ್ರ ಗ್ರಹಿಕೆಯನ್ನು ವಿದ್ಯಾರ್ಥಿಗಳು ಪಡೆಯುವಲ್ಲಿ ಪಠ್ಯ ನೆರವಾಗುತ್ತದೆ.

ಕನ್ನಡ ನಾಡು ರೂಪುಗೊಂಡಿದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯ, ಭಾಷಾವಾರು ಪ್ರಾಂತ್ಯ ರಚನೆ ಏಕೀಕರಣ ಅದರ ಲೋಕದೃಷ್ಟಿ, ಕಲಾ ಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸ್ವೋಪಜ್ಞತೆ, ಅದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಪಠ್ಯವನ್ನು ರೂಪಿಸಬೇಕು.

**ಘಟಕ – 1 :** ಮೊದಲ ಘಟಕದಲಿ ಕನ್ನಡ ನಾಡು ನುಡಿಗಳ ಇತಿಹಾಸ, ವೈಶಿಷ್ಟ್ಯ, ವೈಭವಗಳನ್ನು ಒಳಗೊಂಡ ಪರಿಚಯಿಸುವ ಪಠ್ಯಗಳನ್ನು ಇಲ್ಲಿ ನೀಡಲಾಗಿದೆ. ಇಂದಿನ ವಿದ್ಯುನ್ಮಾನ ಯುಗದಲ್ಲಿ ಸಾಹಿತ್ಯದಿಂದ ವಿಮುಖರಾಗುತ್ತಿರುವ ಯುವ ಪೀಳಿಗೆಗೆ ಸಾಹಿತ್ಯದ ಸಮಕಾಲೀನ ಔಚಿತ್ಯದ ಬಗ್ಗೆ ತಿಳಿಸುವುದು ಇಲ್ಲಿಯ ಮುಖ್ಯ ಆಶಯ. ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಕವಿತೆ, ಲೇಖನಗಳನ್ನು ಇಲ್ಲಿ ಕೊಡಲಾಗಿದೆ.

**ಘಟಕ –2 ಪ್ರಕೃತಿ :**

ಮನುಷ್ಯ ಜೀವಿಯು ಪ್ರಕೃತಿಯ ಅವಿಭಾಜ್ಯ ಅಂಗ. ಪ್ರಕೃತಿ ಮತ್ತು ಮನುಷ್ಯರ ನಡುವಿನ ಅನ್ಯೋನ್ಯ ಸಂಬಂಧ ಇಂದಿನ ಅಗತ್ಯ ಪ್ರಕೃತಿಯನ್ನು ಮೂಲದೇವತೆಯೆಂದು ನೋಡುವ ಆರಾಧನಾ ನೆಲೆ ಅಥವಾ ಮಾತೃನೆಲೆ. ಎರಡನೆಯದು ಪ್ರಕೃತಿಯು ಮನುಷ್ಯರ ಉಪಭೋಗಕ್ಕಾಗಿಯೇ ಇದೆಯೆಂದು ನೋಡುವ ಭೋಗವಾದಿ ನೆಲೆ, ಮೂರನೆಯ ಮುಖ್ಯವಾದ ನೆಲೆ ಎಂದರೆ ಸೌಂದರ್ಯದ ನೆಲೆ. ಇದು ಕಲಾ ಮೀಮಾಂಸೆಯ ಜೊತೆಯಲ್ಲಿಯೇ ಬೆಳೆದು ಬಂದಿದೆ. ಈ ಮೂರು ನೆಲೆಗಳ ಜೊತೆಯಲ್ಲಿಯೇ ಪ್ರಕೃತಿಯು ಮನುಷ್ಯರಿಗೆ ಗುರುವೂ, ಮಾದರಿಯೂ ಆಗುವ ಹಲವು ಅಂಶಗಳು ಇವೆ. ಸಕಲ ಜೀವಜಾತಗಳನ್ನು ಪೊರೆಯುವ, ಬದುಕಲು ಅವಕಾಶ ಮಾಡಿಕೊಡುವ ಸಹಬಾಳ್ವೆಯ ಮೂಲಪಾಠವನ್ನು ಪ್ರಕೃತಿಯಿಂದ ಕಲಿಯಬೇಕಿದೆ. ಹಾಗೆಯೆ ನೆಲೆಯ ನಾಗರಿಕತೆಯ ಮೌಲ್ಯ ವ್ಯವಸ್ಥೆಯನ್ನೇ ಪುನರ್

ರಚಿಸಲು ಅವಕಾಶ ಮಾಡಿಕೊಡುತ್ತದೆ. ನಿತ್ಯನೂತನತೆಯ ನೆಲೆ, ಶಾಶ್ವತ ಮತ್ತು ನಶ್ವರತೆಯ ನೆಲೆ ಜೀವಪರತೆಯ ನೆಲೆ / ಕ್ರಿಯಾಶೀಲತೆಯ ನೆಲೆ ಇತ್ಯಾದ ಅಂಶಗಳನ್ನು ಒಳಗೊಳ್ಳುವ ಪಠ್ಯಗಳನ್ನು ಸೇರಿಸಿಕೊಳ್ಳಬಹುದು. ಪ್ರಕೃತಿಯೊಂದಿಗಿನ ಅನ್ಯೋನ್ಯ ಸಂಬಂಧವನ್ನು ಮರೆತರೆ ಅಪಾಯ ಕಟ್ಟಿಟದ್ದು. ಅತಿಯಾದ ನಗರೀಕರಣದ, ಮತ್ತು ಭೋಗಲಾಲಸೆಯಿಂದ ನಿಸರ್ಗದಿಂದ ದೂರಸರಿಯುತ್ತಿರುವ ಮನುಷ್ಯನನ್ನು ಮತ್ತೆ ಅದರ ಬಳಿಗೆ ತರುವುದು ಅತ್ಯಂತ ಅಗತ್ಯ. ಆದ್ದರಿಂದ ಎರಡನೇ ಘಟಕದಲ್ಲಿ ಕನ್ನಡದ ವಿವಿಧ ಕವಿಗಳ ಲೇಖಕರ ಪ್ರಕೃತಿ ಕುರಿತ ಪಠ್ಯಗಳನ್ನು ಸಂಯೋಜಿಸಿದೆ.

**ಘಟಕ –3 ಬಾಲ್ಯ :**

ಬಾಲ್ಯವು ಮಾನವ ಬದುಕಿನ ಅತ್ಯಂತ ಮುಖ್ಯವಾದ ಮಾತ್ರವಲ್ಲ, ಸುಂದರವಾದ ಘಟ್ಟವೂ ಹೌದು. ಮನುಷ್ಯರ ವ್ಯಕ್ತಿತ್ವವು ಬಾಲ್ಯದ ಧಾತುವಿನಿಂದಲೇ ರೂಪುಗೊಳ್ಳುತ್ತದೆ. 'ಆ ಕಾಲವೊಂದಿತ್ತು ಬಾಲ್ಯ ತಾನಾಗಿತ್ತು' ಎನ್ನುವ ಕವಿವಾಣಿಯೂ ಇದನ್ನು ಸಮರ್ಥಿಸುತ್ತದೆ. ಬಾಲ್ಯದ ಮುಗ್ಧತೆ, ನಂಬಿಕೆ, ಕರಾರುಗಳಿಲ್ಲದ ಪ್ರೀತಿ, ಬದುಕಿನ ಪ್ರತಿ ಕ್ಷಣವನ್ನು ಉತ್ಕಟವಾಗಿ ಅನುಭವಿಸುವ ಮನಸ್ಥಿತಿ, ಕ್ಷಮಾಗುಣ, ಕುತೂಹಲ, ಪ್ರಶ್ನೆಗಳನ್ನು ಒಳಗೊಂಡ ಕಾಲವಿದು. ಹೀಗೆ ರಮ್ಯವಾಗಿ ಕಾಣಿಸುವ ಬಾಲ್ಯಕಾಲಕ್ಕೆ ದುರಂತದ ಮುಖವೂ ಇದೆ. ಬಾಲಕಾರ್ಮಿಕರಿಂದ ಹಿಡಿದು, ಶಿಕ್ಷಣ ವಂಚಿತರಾದ ಇನ್ನಿತರ ಹಲವು ಬಗೆಯ ಶೋಷಣೆ ಮತ್ತು ದೌರ್ಜನ್ಯಗಳಿಗೆ ಒಳಗಾಗುವ ಸಂದರ್ಭಗಳನ್ನೂ ಪಠ್ಯದ ತಯಾರಿಯ ಸಂದರ್ಭದ ಗಮನಿಸಬೇಕು. ಬಾಲ್ಯದಲ್ಲಿ ಎದುರಾದ ಹಲವು ಘಟನೆಗಳು ಇಡಿ ಬದುಕಿನ ಮೇಲೆ ಪರಿಣಾಮ ಬೀರುವಷ್ಟು ಪ್ರಬಲವಾಗಿರುತ್ತದೆ. ವ್ಯಕ್ತಿತ್ವವನ್ನು ರೂಪಿಸುವಲ್ಲಿ ಬಾಲ್ಯದ ಪಾತ್ರ ಪ್ರಮುಖವಾದುದು. ಇದೇ ತಾನೇ ಬಾಲ್ಯಾವಸ್ಥೆಯನ್ನು ದಾಟಿ ಹದಿಹರೆಯಕ್ಕೆ ಕಾಲಿಡುತ್ತಿರುವ ಪದವಿ ವಿದ್ಯಾರ್ಥಿಗಳಿಗೆ ತಮ್ಮ ಬಾಲ್ಯ ಬಣ್ಣಗಳನ್ನು ಮೆಲುಕು ಹಾಕುವ ಅವಕಾಶ ನೀಡಿ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಅವರದೇ ಹೊಸಲೋಕವನ್ನು ಸೃಜಿಸುವಂತೆ ಪ್ರೇರೇಪಿಸುವ ರೀತಿಯ ಪಠ್ಯವನ್ನು ಇಲ್ಲಿ ರೂಪಿಸಿದೆ.

**ಘಟಕ –4 ಸಂಕೀರ್ಣ :**

- ಈ ಭಾಗದಲ್ಲಿ ಕಲೆ ಮತ್ತು ಸಾಹಿತ್ಯ, ಕಲೆ ಮತ್ತು ಮನೋವಿಕಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿಸಬೇಕು.
- ಕಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಪಠ್ಯದಲ್ಲಿಲ್ಲದ ವಿಷಯಗಳನ್ನು ತಿಳಿಸಬೇಕು.
- ಇದಕ್ಕೆ ಸಂಬಂಧಿಸಿದ ವಿಶೇಷ ಪಠ್ಯಗಳನ್ನು ಆಧರಿಸಿದಂತೆ ಜ್ಞಾನವನ್ನು ಹೆಚ್ಚಿಸುವುದಕ್ಕೆ ಆದ್ಯತೆ ನೀಡಬೇಕು.

**ಪ್ರಥಮ ಚತುರ್ಮಾಸ ಬಿ.ಎ., 2021–22ನೇ ಸಾಲಿನ ಕನ್ನಡ ಭಾಷಾ ಪಠ್ಯಪುಸ್ತಕ**

**ಬಿ.ಎ. ಕಲಾ ಗಂಗೋತ್ರಿ–1 ಎನ್.ಇ.ಪಿ ಪಠ್ಯಕ್ರಮ**


**ಘಟಕ–1 ಕನ್ನಡ ನಾಡು – ನುಡಿ ಚಿಂತನೆ**

1. ಅ. ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು (ವಿವಿಧ ಕಾವ್ಯಗಳಿಂದ ಆಯ್ದ ಪದ್ಯಗಳು)
   ಆ. ನಿತ್ಯೋತ್ಸವ – ಕೆ.ಎಸ್. ನಿಸಾರ್ ಅಹಮದ್
2. ಹೊಯಿಸಳನ ದಳಪತಿ – ಮಾಸ್ತಿ ವೆಂಕಟೇಶ ಅಯ್ಯಂಗಾರ್
3. ತನ್ನನ್ನು ತಿಳಿದುಕೊಳ್ಳಬೇಕಾದ ಕರ್ನಾಟಕ – ಪಾಟೀಲ ಪುಟ್ಟಪ್ಪ

**ಘಟಕ–2 ಬಾಲ್ಯ**

1. ಋತು ಸಂಹಾರ – ಡಾ. ಬಂಜಗೆರೆ ಜಯಪ್ರಕಾಶ್
2. ರಾಮರಾವಣರ ಯುದ್ಧ – ಕುವೆಂಪು
3. ಕೇಳದ ಕಾಣದ ಸಂಗತಿಗಳು – ಸಿದ್ದಲಿಂಗಯ್ಯ

**ಘಟಕ–3 ಪ್ರಕೃತಿ**

1. ಅ. ಮಲ್ಲಿಗೆ – ಜೆ.ಎಸ್. ಶಿವರುದ್ರಪ್ಪ
   ಆ. ಯದುಗಿರಿಯ ಮೌನ ವಿಕಾಸ – ಪು.ತಿ.ನ
   (ಮೂಡಣ ಕಣಿವೆಯ ಮೌನ)
2. ಒಂಟಿಸಲಗ – ಕೃಪಾಕರ ಸೇನಾನಿ
3. ಹೊಳೆಗಳ ಮೂಲಕ ಕರ್ನಾಟಕ – ರಹಮತ್ ತರೀಕೆರೆ

**ಘಟಕ–4 ಸಂಕೀರ್ಣ**

1. ಅ. ಗಾರ್ಮೆಂಟ್ ಹುಡುಗಿ ಹೊಲಿದ ಚೆಂದದ ಪೋಷಾಕು – ಡಾ. ಸಬಿತಾ ಬನ್ನಾಡಿ
   ಆ. ಮೈಲುಗಲ್ಲುಗಳು – ಸುಕನ್ಯಾ ಮಾರುತಿ
2. ಪಿಗ್ಮಿ ಏಜೆಂಟ್ ಮತ್ತು ಗಾಂಧಿ ಜೋಗತಿ – ಮಂಜಮ್ಮ ಜೋಗತಿ
   (ನಿರೂಪಣೆ : ಅರುಣ್ ಜೋಳದ ಕೂಡ್ಲಿಗಿ)
3. ತೇಲಸಂಗದ ಹೆಂಗಸರಿಗೆ ಸಲಾಂ! – ಡಾ. ವಿನಯಾ

**ಪ್ರಧಾನ ಸಂಪಾದಕರು**
ಡಾ. ವಿಜಯಕುಮಾರಿ ಎಸ್. ಕರಿಕಲ್

**ಸಂಪಾದಕರು**
ಡಾ. ರಾಮಕೃಷ್ಣ ಎಂ.

**ಸಹ ಸಂಪಾದಕರು**
ಪ್ರೊ. ಡಿ. ವಿಜಯಲಕ್ಷ್ಮಿ
ಡಾ. ಪಿ. ಬೆಟ್ಟೇಗೌಡ
ಡಾ. ಗಣೇಶ
ಡಾ. ಭಾರತೀದೇವಿ ಪಿ.

## ಬಿ.ಎ., ಬಿ.ಪಿ.ಎ., ಬಿ.ಎಸ್.ಡಬ್ಲ್ಯೂ–ಕನ್ನಡ ಭಾಷಾ ಪತ್ಯ

## ಸೆಮಿಸ್ಟರ್–2

| | |
|---|---|
| Course Title | ಬಿ.ಎ., ಬಿ.ಪಿ.ಎ., ಬಿ.ಎಸ್.ಡಬ್ಲ್ಯೂ– **ಕನ್ನಡ ಭಾಷಾ ಪತ್ಯ** |
| Total Contact Hourse : 52 to 56 | Course Credits : 03 |
| Formative Assessment Marks : 40 (CIE) | Duratin of ESA/Exam : 3 hours |
| Model Syllabus Authors : Multiple Authors | Summative Assessment Marks : 60 (SEE) |
| | |
| ವಿವರಗಳು | ಬೋಧನಾ ಅವಧಿ |
| ಘಟಕ–1 ಜಾಗತೀಕರಣ | 13/14 |
| ಘಟಕ–2 ಸಮಾಜ | 13/14 |
| ಘಟಕ–3 ಪ್ರೀತಿ | 13/14 |
| ಘಟಕ–4 ಸಂಕೀರ್ಣ | 13/14 |

**ಘಟಕ –1 ಜಾಗತೀಕರಣ :**

ಜಾಗತೀಕರಣವು ಸಮಕಾಲೀನ ಜಗತ್ತಿನ ಪ್ರಮುಖ ವಿದ್ಯಮಾನವಾಗಿದ್ದು, ಅದು ಇಂದು ಆಯ್ಕೆಯಾಗಿ ಉಳಿದಿಲ್ಲ. ಎರಡನೇ ಸೆಮಿಸ್ಟರ್‌ನಲ್ಲಿ ಜಾಗತೀಕರಣ ಸಮಾಜ, ಪ್ರೀತಿ ಮತ್ತು ಸಂಕೀರ್ಣ ಎಂಬ ನಾಲ್ಕು ಘಟಕಗಳಿವೆ. ಜಾಗತೀಕರಣ ಇಂದು ಪ್ರಮುಖ ವಿದ್ಯಮಾನವಾಗಿದ್ದು ಎಲ್ಲಾ ರಾಷ್ಟ್ರಗಳೂ ಅದರಲ್ಲಿ ಒಳಗೊಳ್ಳುತಿವೆ. ಇದರ ಪರಿಣಾಮಗಳನ್ನು ಕುರಿತು ಸಾಹಿತ್ಯ ಲೋಕದಲ್ಲಿ ಹಲವು ಚರ್ಚೆಗಳು ನಡೆದಿವೆ. ಜಾಗತೀಕರಣ ಪ್ರಗತಿ ಎನಿಸಿದರೂ ಒಟ್ಟಾರೆ ನಮ್ಮ ಸಾಂಸ್ಕೃತಿಕ ಬರಹಗಳಲ್ಲಿ ಪಲ್ಲಟ ಉಂಟುಮಾಡಿದೆ. ಈ ಹಿನ್ನೆಲೆಯಲ್ಲಿ ಜಾಗತೀಕರಣದ ಬಗ್ಗೆ ವಿದ್ಯಾರ್ಥಿಗಳನ್ನು ವಾಸ್ತವ ಚಿಂತನೆಗೆ ಒಳಗು ಮಾಡುವ ಉದ್ದೇಶ ಈ ಪತ್ಯಗಳಲ್ಲಿದೆ.

ಸಮಾಜ ಬಹುಮುಖಿಯಾದದ್ದು ಇಲ್ಲಿ ಸಂಘರ್ಷ ಅನುಸಂಧಾನದ ಪ್ರಕ್ರಿಯೆಗಳು ನಿರಂತರ, ಜಾತಿ, ಧರ್ಮ,ವರ್ಗ, ಲಿಂಗ ಮೂಲದ ರಾಜಕಾರಣದ ಚಹರೆಗಲನ್ನು ಸಾಹಿತ್ಯ ಘೋಷಿತ ನೆಲೆಯಲ್ಲಿರೋ

ಅಥವಾ ಅಘೋಷಿತ ನೆಲೆಯಲ್ಲಿಯೋ ಹಿಡಿದಿಟ್ಟಿರುತ್ತದೆ. ಏಕೆಂದರೆ ಸಾಹಿತ್ಯವೂ ಸಮಾಜದ ಸೃಷ್ಟಿ ಇವೆಲ್ಲವುಗಳಿಗೆ ಒಳಗಾಗಿಯೇ ಅವುಗಳನ್ನು ಮೀರುವ ಕಲೆಯನ್ನು ರೂಪಿಸಿಕೊಳ್ಳಲು ಅನುಕೂಲವಾಗುವಂತೆ ಪಠ್ಯವನ್ನು ಸಿದ್ಧಪಡಿಸಲಾಗಿದೆ.

ಜಾಗತೀಕರಣವು ಸಮಕಾಲೀನ ಜಾಗತಿಕ ವಿದ್ಯಮಾನವಾಗಿದ್ದು, ಅದು ಇಂದು ಆಯ್ಕೆಯಾಗಿ ಉಳಿದಿಲ್ಲ. ಅದು ಬೇಕಾಗಿ ಬೇಡವಾಗಿ ಎಲ್ಲ ರಾಷ್ಟ್ರಗಳೂ ಅನಿವಾರ್ಯವಾಗಿ ಒಳಗಾಗುತ್ತಿರುವ ಒಂದು ಪ್ರಕ್ರಿಯೆಯಾಗಿದೆ. ಇಡೀ ವಿಶ್ವವನ್ನೇ 'ಏಕತಾಣ'ವಾಗಿ 'ವಿಶ್ವ ಹಳ್ಳಿ'ಯಾಗಿ ರೂಪಿಸುವುದು ಇದರ ಉದ್ದೇಶವಾಗಿದೆ. ಆದರೆ ಇದರ ಪರಿಣಾಮವು ಮಾತ್ರ ಇದಕ್ಕೆ ವಿರುದ್ಧವಾಗಿದೆ. ಇದರ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಅಂಶಗಳನ್ನು ಪಠ್ಯಗಳಾಗಿ ಇಡುವ ಮೂಲಕ ವಿದ್ಯಾರ್ಥಿಗಳಲ್ಲಿ ಸಮಕಾಲೀನ ಆಗುಹೋಗುಗಳನ್ನು ಕುರಿತ ಅರಿವನ್ನು ಹೆಚ್ಚಿಸಬಹುದಾಗಿದೆ. ಸಂಸ್ಕೃತಿಗಳ ವೈವಿಧ್ಯತೆ, ಜೀವಂತಿಕೆಯನ್ನು ನಾಶ ಮಾಡುತ್ತಾ ಏಕರೂಪಿ ಸಂಸ್ಕೃತಿಯನ್ನು ಇದು ರೂಪಿಸುತ್ತಿದೆ. ಅಹಾರ, ವಸ್ತ್ರ, ಕ್ರೀಡೆ, ಸಾಂಸ್ಕೃತಿಕ ಆಚರಣೆಗಳು, ದೈನಂದಿನ ಬಳಕೆಯ ಉತ್ಪನ್ನಗಳು ಈ ಎಲ್ಲದರ ಮೇಲೂ ಬಲಾಢ್ಯ ರಾಷ್ಟ್ರಗಳ ಆಕ್ರಮಣವಾಗುತ್ತಿದೆ. ಭಾರತವೂ ಸೇರದಿಂತೆ ಮೂರನೇ ಜಗತ್ತಿನ ರಾಷ್ಟ್ರಗಳು ಇದರ ಮೂಲ ಬಲಿಪಶುಗಲಾಗುತ್ತಿವೆ ಎನ್ನುವುದನ್ನು ನಾವು ಅವಶ್ಯವಾಗಿ ಗಮನಿಸಬೇಕು. ಅನೇಕತೆಯಲ್ಲಿ ಏಕತೆ ಎನ್ನುವ ಜನತಾಂತ್ರಿಕ ಆಶಯಕ್ಕೆ ವಿರುದ್ಧವಾಗಿ ಏಕತೆಯ ದಬ್ಬಾಳಿಕೆಯ ಮೂಲಕ ಅನೇಕ ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳನ್ನೇ ನಾಶ ಮಾಡುವ ಮೂಲಕ ಹಲವು ವೃತ್ತಿಗಳನ್ನೇ ಇದು ವಿನಾಶದಂಚಿಗೆ ತಳ್ಳುತ್ತಿದೆ ಎನ್ನುವ ಅಂಶವನ್ನೂ ಗಮನಿಸಬೇಕು. ಅಮಾನವೀಯ ಮಾನೋವಿನ್ಯಾಸವನ್ನೂ (ಏಕರೂಪಿ) ಇದು ರೂಪಿಸುತ್ತಿದೆ. ಈ ಸಂಗತಿಗಳ ಬಗೆಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುತ್ತ ಬಹುತ್ವದ, ವೈವಿಧ್ಯದ ನೆಲೆಗಳಿಂದಲೇ ಬದುಕು ಸಾರ್ಥಕ ಎಂಬ ವಿಷಯವನ್ನು ಮನಗಾಣಿಸುವಂತಹ ಪಠ್ಯಗಳನ್ನು ರೂಪಿಸಿದೆ.

**ಘಟಕ –2 ಸಮಾಜ :**

ಮಾನವ ಸಮುದಾಯವು ಕುಟುಂಬದ ನಂತರ ರೂಪಿಸಿಕೊಂಡ ಘಟಕ ಇದು.ಹಲವು ವೃತ್ತಿಗಳ, ವರ್ಗಗಳ ಮತ್ತು ಲಿಂಗಗಳ ವ್ಯವಸ್ಥೆಯಾಗಿ ಮೇಲ್ನೋಟಕ್ಕೆ ಕಂಡರೂ ನಿಜದಲ್ಲಿ ಪ್ರಕೃತಿ, ಪ್ರಾಣಿ, ಪಕ್ಷಿಗಳು, ಪ್ರಭುತ್ವ, ಸಾಮಾಜಿಕ ಸಂರಚನೆ, ಧಾರ್ಮಿಕ ವ್ಯವಸ್ಥೆ ಈ ಎಲ್ಲವೂ ಸೇರಿ ಸಮಾಜವೊಂದು ರೂಪುಗೊಳ್ಳುತ್ತದೆ. ಮಾನವರಿಗೆ ವೈಯಕ್ತಿಕ ಬದುಕು ಮತ್ತು ವ್ಯಕ್ತಿತ್ವ ಇರುವಂತೆಯೇ ಸಾಮಾಜಿಕ ಬದುಕು ಮತ್ತು ವ್ಯಕ್ತಿತ್ವವೂ ಇರಬೇಕು ಎನ್ನುವುದನ್ನು ಸಮಾಜ ವ್ಯವಸ್ಥೆಯು ಒತ್ತಾಯಿಸುತ್ತದೆ. ಮನುಷ್ಯ ಮೂಲತಃ ಸಂಘಜೀವಿಯಾದ್ದರಿಂದ ಸಮಾಜವನ್ನು ನಿರಾಕರಿಸಿ ಬದುಕುವುದು ಸಾಧ್ಯವಿಲ್ಲ. ಭಾರತದಂತಹ ಶ್ರೇಣೀಕೃತ ವ್ಯವಸ್ಥೆಯಲ್ಲಿ ಸಮಾಜವು ಬಹುಮುಖಿ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದೆ. ಸಮಾಜವು ನೈತಿಕ ಕಾವಲುಗಾರನ ಜವಾಬ್ದಾರಿಯನ್ನು ನಿಭಾಯಿಸಬೇಕೆನ್ನುವುದು ಆದರ್ಶ. ಆದರೆ ವಾಸ್ತವವು ಇದಕ್ಕೆ ವಿರುದ್ಧವಾಗಿದೆ. ಪಟ್ಟಭದ್ರರ ಕೈಮೇಲಾಗುತ್ತಾ ಬಂದಿರುವುದನ್ನು ಇತಿಹಾಸದುದ್ದಕ್ಕೂ ನಾವು

ಗಮನಿಸಬಹುದು. ಪಠ್ಯಗಳು ಈ ಎಲ್ಲ ಅಂಶಗಳನ್ನೂ ಒಳಗೊಂಡಂತಹ ಪಠ್ಯಗಳನ್ನು ಈ ಭಾಗದಲ್ಲಿ ಇಡುವ ಮೂಲಕ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಬದುಕಿನ ಪ್ರಜ್ಞೆ ಮಾಡಿಸುವುದು ಮತ್ತು ಜವಾಬ್ದಾರಿ ನಾಗರಿಕನಾಗುವಂತೆ ಪ್ರೇರೇಪಿಸುವ ಉದ್ದೇಶವಿದೆ.

**ಘಟಕ –3 ಪ್ರೀತಿ :**

ಪ್ರೀತಿ ಎನ್ನುವುದು ಮನುಷ್ಯರ ಮಾತ್ರವಲ್ಲ ಜಗದ ಮೂಲತತ್ವವೇ ಆಗಿದೆ. ಬದುಕನ್ನು, ಸಂಬಂಧಗಳನ್ನು ವೃತ್ತಿಯನ್ನು ಸಮುದಾಯವನ್ನು ಹೀಗೆ ಯಾವುದನ್ನೇ ತೆಗೆದುಕೊಂಡರೂ ಪ್ರೀತಿಯ ಜೀವದ್ರವ್ಯವಿಲ್ಲದೆ ಯಾವುದನ್ನೂ ಕಟ್ಟಲಾಗದು. ಪ್ರೀತಿ ಅಕಾರಣವಾಗಿರಬೇಕು ದ್ವೇಷ ಸಕಾರಣವಾಗಿರಬೇಕು ಎನ್ನುವುದು ಪ್ರೀತಿಯ ಅಸಾಧಾರಣ ಸಾಧ್ಯತೆಯನ್ನು ಬಿಂಬಿಸುತ್ತದೆ. ಅಪ್ಪಟ ಪ್ರೀತಿಯು ಎಲ್ಲವನ್ನೂ ಒಳಗೊಳ್ಳುತ್ತಾ, ಎಲ್ಲರನ್ನೂ ಎಲ್ಲವನ್ನೂ ಬೆಳೆಸುವ ಬೆಸೆಯುವ ಆಶಯದ್ದು. ಆದ್ದರಿಂದಲೇ ಪ್ರೀತಿ ತತ್ವ **'ಒಳಗೊಳ್ಳುವ'** ನೆಲೆಯದ್ದೇ ಹೊರತು ನಿರಾಕರಣೆಯ ನೆಲೆಯದ್ದಲ್ಲ. ಪ್ರೀತಿಯನ್ನು ಜೀವಾನುಕಂಪೆ ಎಂದೂ ಕರೆಯಬಹುದು. ಸಾಮರಸ್ಯದ ಬದುಕಿನ ಅಗತ್ಯವಿರುವ ಪ್ರಸ್ತುತ ಬದುಕಿನ ಸಂದರ್ಭದಲ್ಲಿ ಪ್ರೀತಿ ತತ್ವವನ್ನು ಬೆಳೆಸುವ ಪಠ್ಯಗಳನ್ನು ವಿದ್ಯಾರ್ಥಿಗಳಿಗೆ ಓದಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಬದುಕನ್ನು ಜಗತ್ತನ್ನು ನಿರ್ವ್ಯಾಜವಾಗಿ ಪ್ರೀತಿಸುವ ಮನೋಭಾವವನ್ನು ಬೆಳಡಸುವಂತಹ ಪಠ್ಯಗಳನ್ನು ರೂಪಿಸಿದೆ.

**ಘಟಕ –4 ಸಂಕೀರ್ಣ :**

ಈ ನಾಲ್ಕನೇ ಘಟಕದಲ್ಲಿ ಸಂಕೀರ್ಣ ಎಂಬ ತಲೆಬರಹದಡಿ ಬೇರೆ ಬೇರೆ ವಿಷಯಗಳ ಪರಿಚಯಕ್ಕೆ ಒತ್ತು ನೀಡಲಾಗಿದೆ. ಕಲಾವಿಷಯಗಳಿಗೆ ಪ್ರಾಮುಖ್ಯತೆ ನೀಡುವುದರ ಮೂಲಕ ಸಾಹಿತ್ಯೇತರ ಶಿಸ್ತುಗಳು ಸಾಹಿತ್ಯದೊಂದಿಗೆ ಪಡೆದುಕೊಂಡಿರುವ ಸಂಬಂಧದ ಚರ್ಚೆ ಮಾಡಲಾಗಿದೆ. ಜೊತೆಗೆ ಸಾಹಿತ್ಯದ ಅನನ್ಯತೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿಕೊಳ್ಳಲು ಮತ್ತು ಸಂಭಾವ್ಯ ಪ್ರಶ್ನೆಗಳ ಮೂಲಕ ಸಂಬಂಧಿತ ಪಠ್ಯವನ್ನು ಗ್ರಹಿಸಲು ಅನುವು ಮಾಡಿಕೊಳ್ಳಲಾಗಿದೆ. ಮತ್ತು ಪರಿಕಲ್ಪನೆಗಳ ವಿಸ್ತೃತ ಅರಿವಿಗೆ ಸಹಕಾರ ನೀಡಲಾಗಿದೆ.

- ಕಲಾ ವಿಷಯಗಳ ಪ್ರಾಮುಖ್ಯತೆ ಮತ್ತು ಪ್ರಯೋಜನ.
- ಸಾಹಿತ್ಯದ ಅಗತ್ಯತೆ.
- ಸಾಹಿತ್ಯ ಮತ್ತು ಇತರ ಶಿಸ್ತುಗಳ ಸಂಬಂಧ.

## ದ್ವಿತೀಯ ಚತುರ್ಮಾಸ ಬಿ.ಎ., 2021–22ನೇ ಸಾಲಿನ ಕನ್ನಡ ಭಾಷಾ ಪಠ್ಯಪುಸ್ತಕ

## ಕಲಾ ಗಂಗೋತ್ರಿ–2 ಎನ್.ಇ.ಪಿ ಪಠ್ಯಕ್ರಮ

**ಘಟಕ–1 ಜಾಗತೀಕರಣ**

1. ಅ. ಇಗೋ ಬಂದೆ – ಎಚ್.ಎಸ್.ಶಿವಪ್ರಕಾಶ್
   ಆ. ಕುಂಟೋಬಿಲ್ಲೆ – ಎ.ಕೆ.ರಾಮಾನುಜನ್
2. ಬಿಡುಗಡೆ – ಚಂದ್ರಕಾಂತ ವಡ್ಡು
3. ಶಹರದ ಕೊಂಬೆಗಳಲ್ಲಿ ಹಳದಿ ಎಲೆಗಳು – ಜಯಂತ ಕಾಯ್ಕಿಣಿ

**ಘಟಕ–2 ಸಮಾಜ**

1. ಅ) ರೊಟ್ಟಿ ಮತ್ತು ಕೋವಿ – ಸು.ರಂ.ಎಕ್ಕುಂಡಿ
   ಆ) ಕುಕ್ಕರ್ – ಡಾ. ಸಬೀಹಾ ಭೂಮಿಗೌಡ
2. ಬಕ್ಷೀಸು – ದು.ಸರಸ್ವತಿ
3. ನಾನ್ಯಾರಿಗಲ್ಲದವಳು – ಜಿ.ವಿ.ಆನಂದಮೂರ್ತಿ

**ಘಟಕ–3 ಪ್ರೀತಿ**

1. ಬಾರೆ, ನನ್ನ ಶಾರದೆ – ಕೆ.ಎಸ್.ನರಸಿಂಹಸ್ವಾಮಿ
   ಪ್ರೀತಿ ಇಲ್ಲದ ಮೇಲೆ – ಜಿ.ಎಸ್.ಶಿವರುದ್ರಪ್ಪ
2. ಅವ್ವ – ಬೆಸಗರಹಳ್ಳಿ ರಾಮಣ್ಣ
3. ಪ್ರೀತಿಯ ಪೂರ್ಣತೆ – ಗೌರೀಶ ಕಾಯ್ಕಿಣಿ

**ಘಟಕ–4 ಸಂಕೀರ್ಣ**

1, ಪರಂಪರೆ – ಡಾ.ವಿಜಯಾ ದಬ್ಬೆ
2. ಸಂಬಳಕ್ಕೆ ಸಿಕ್ಕಿಕೊಂಡ ದೆವ್ವ – ಪೂರ್ಣಚಂದ್ರ ತೇಜಸ್ವಿ
3. ಎದೆಗೆ ಬಿದ್ದ ಅಕ್ಷರ ಕೃತಿಯ ಆಯ್ದ ಭಾಗಗಳು – ದೇವನೂರ ಮಹಾದೇವ

**ಪ್ರಧಾನ ಸಂಪಾದಕರು**
ಡಾ. ವಿಜಯಕುಮಾರಿ ಎಸ್. ಕರಿಕಲ್

**ಸಂಪಾದಕರು**
ಡಾ. ರಾಮಕೃಷ್ಣ ಎಂ.

**ಸಹ ಸಂಪಾದಕರು**
ಪ್ರೊ. ಡಿ. ವಿಜಯಲಕ್ಷ್ಮಿ
ಡಾ. ಪಿ. ಬೆಟ್ಟೇಗೌಡ
ಡಾ. ಗಣೇಶ
ಡಾ. ಭಾರತೀದೇವಿ ಪಿ.

**ಬಿ.ಎಸ್ಸಿ.**

**ಸೆಮಿಸ್ಟರ್–1**

| | |
|---|---|
| Course Title | ಬಿ.ಎಸ್ಸಿ.–**ಕನ್ನಡ ಭಾಷಾ ಪಠ್ಯ** |
| Total Contact Hourse : 52 to 56 | Course Credits : 03 |
| Formative Assessment Marks : 40 (CIE) | Duratin of ESA/Exam : 3 hours |
| Model Syllabus Authors : Multiple Authors | Summative Assessment Marks : 60 (SEE) |
| | |
| ವಿವರಗಳು | ಬೋಧನಾ ಅವಧಿ |
| ಘಟಕ–1 ಕನ್ನಡ ನಾಡು–ನುಡಿ–ಚಿಂತನೆ | 13/14 |
| ಘಟಕ–2 ಭೂಮಿ | 13/14 |
| ಘಟಕ–3 ವೈಜ್ಞಾನಿಕ ಮನೋಧರ್ಮ | 13/14 |
| ಘಟಕ–4 ಸಂಕೀರ್ಣ | 13/14 |

**ಘಟಕ –1 ಕನ್ನಡ ನಾಡು–ನುಡಿ–ಚಿಂತನೆ :**

ಕನ್ನಡ ನಾಡು ರೂಪುಗೊಂಡದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯತೆ, ಅದರ ಲೋಕದೃಷ್ಟಿ, ಕಲಾ ಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸ್ವೋಪಜ್ಞತೆ, ಅದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಪಠ್ಯವನ್ನು ರೂಪಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ನಾಡು – ನುಡಿ ಕುರಿತ ಅಭಿಮಾನವನ್ನು ಜಾಗೃತಗೊಳಿಸುವುದು ಈ ಘಟಕದ ಉದ್ದೇಶವಾಗಿರುತ್ತದೆ.

**ಘಟಕ –2 ಭೂಮಿ :**

ಭೂಮಿಯು ಮನುಷ್ಯರ ಮೂಲರಂಗವಾಗಿದೆ. ಭೂಮಿಯು ನಮ್ಮ ಮೂಲದೇವತೆಯೂ ಹೌದು. ಆದ್ದರಿಂದಲೇ ಭೂಮಿತಾಯಿ ಎನ್ನುವುದು ಆರಾಧನೆಯ ನೆಲೆ ಮಾತ್ರವಲ್ಲ, ಅದು ನಮ್ಮ ಅಸ್ತಿತ್ವದ ಸಂಗತಿಯೂ ಆಗಿದೆ. ಭೂಮಿಯಿಲ್ಲದೆ, ಭೂಮಿಯ ಜೀವ ಸಂಪನ್ಮೂಲಗಳಿಲ್ಲದೆ ಮನುಷ್ಯರ ಅಸ್ತಿತ್ವವೇ

ಇರಲಾರದು. ಭೂಮಿಯ ಒಳಗು, ಹೊರಗು ಈ ಎಲ್ಲವು ನಮ್ಮ ಸವಲತ್ತೂ ಹೌದು. ಜವಾಬ್ದಾರಿಯೂ ಹೌದು. ಇತ್ತೀಚಿನ ಕಾಲಘಟ್ಟದಲ್ಲಿ ಭೂಮಿಯನ್ನು ಮನುಷ್ಯರು ಶೋಷಣೆ ಮಾಡುತ್ತಾ ಬಂದಿದ್ದು ಮನುಕುಲದ ಅಸ್ತಿತ್ವವೇ ಆತಂಕವನ್ನು ಎದುರಿಸುತ್ತಿದೆ. ಈ ಭಾಗದಲ್ಲಿ ಭೂಮಿಯ ವೈಜ್ಞಾನಿಕ ವಿವರಣೆಯಿಂದ ಹಿಡಿದು, ಆರಂಭದಿಂದ ಇಲ್ಲಿಯ ತನಕ ಮನುಷ್ಯರು ಭೂಮಿಯನ್ನು ನೋಡುತ್ತಾ ಬಂದಿರುವ ದೃಷ್ಟಿಕೋನಗಳನ್ನು ಪಠ್ಯವಾಗಿ ಇಡಬಹುದು. ಆರಾಧನೆಯಿಂದ ಹಿಡಿದು ಇಲ್ಲದ ಅಧಿಕಾರವನ್ನು ಭೂಮಿಯ ಮೇಲೆ ಚಲಾಯಿಸುವುದರ ತನಕ ಪಠ್ಯ  ವಸ್ತುಗಳನ್ನು ಆರಿಸಿಕೊಳ್ಳುವುದು. ಜಲಸಂಪನ್ಮೂಲಗಳಿಂದ ಹಿಡಿದು, ಅದಿರುಗಳು, ಕೃಷಿ ಈ ಎಲ್ಲವನ್ನೂ ಒಳಗೊಳ್ಳುವುದು, ಭೂಮಿಯ ಮೇಲಿನ ಮನುಷ್ಯರ ಅತಿಕ್ರಮಣದಿಂದಾಗುವ ದುಷ್ಪರಿಣಾಮಗಳಿಗೆ ಒತ್ತು ಕೊಡುವುದು ಸಮಕಾಲೀನ, ಆತಂಕಗಳ ಹಿನ್ನೆಲೆಯಲ್ಲಿ ಅಪೇಕ್ಷಣೀಯ. ಸಾಹಿತ್ಯದ ಮತ್ತು ಸಾಹಿತ್ಯೇತರ ಆಕರಗಳಿಂದಲೂ ಪಠ್ಯಗಳನ್ನು ಆರಿಸಿಕೊಂಡು ಭೂಮಿಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು ಈ ಭಾಗದ ಉದ್ದೇಶವಾಗಿರುತ್ತದೆ.

**ಘಟಕ –3 ವೈಜ್ಞಾನಿಕ ಮನೋಧರ್ಮ :**

ಆಧುನಿಕ ಭಾರತೀಯ ಸಮಾಜವು ಎದುರಿಸುತ್ತಿರುವ ಮುಖ್ಯ ಸವಾಲುಗಳಲ್ಲಿ ಒಂದು ವೈಜ್ಞಾನಿಕ ಮನೋಧರ್ಮದ ಕೊರತೆ, ಸಾಂಪ್ರದಾಯಿಕ, ವಿಧಿವಾದಿ ಬದುಕಿನ ದೃಷ್ಟಿಕೋನವು ಭಾರತೀಯರನ್ನು ವೈಜ್ಞಾನಿಕ ಮನೋಧರ್ಮದಿಂದ ಅಂತರದಲ್ಲಿ ಇಟ್ಟಿದೆ. ಅಥವಾ ವೈಜ್ಞಾನಿಕ ಮನೋಧರ್ಮ ಮತ್ತು ಮೂಢನಂಬಿಕೆಗಳ ನಡುವಿನ ಸಂಘರ್ಷವು ಭಾರತೀಯರ ಲಕ್ಷಣವೇ ಆಗಿಬಿಟ್ಟಿದೆ. ವಿಜ್ಞಾನಿಗಳು, ಪ್ರಗತಿಪರ ಚಿಂತಕರು ಭಾರತದ ಪ್ರಗತಿಗೆ ಮಾರಕವಾಗಿರುವ ಸಂಗತಿಗಳಲ್ಲಿ ಇದೂ ಒಂದು ಎಂದು ಪ್ರತಿಪಾದಿಸುತ್ತಾರೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವುದು ತೀರ ಅಗತ್ಯವಾಗಿದೆ. ನಂಬಿಕೆಗೂ, ಮೂಢನಂಬಿಕೆಗೂ ಇರುವ ವ್ಯತ್ಯಾಸವನ್ನು ತಿಳಿಸುವುದರ ಜೊತೆಗೆ ವೈಜ್ಞಾನಿಕ ಮನೋಧರ್ಮವು ಆರೋಗ್ಯಕರವಾದ ಮತ್ತು ಸಮಾನ ಪಾತಳಿಯ ಬದುಕಿನ ಕ್ರಮಗಳನ್ನು ರೂಪಿಸಬಲ್ಲದು ಎನ್ನುವುದನ್ನು ತಿಳಿಸುವುದು. ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಲೋಕಗಳಲ್ಲಿನ ತರತಮಗಳನ್ನು ನಿವಾರಿಸುವಲ್ಲಿ ವೈಜ್ಞಾನಿಕ ಮನೋಭಾವದ ಪಾತ್ರವನ್ನು ಚರ್ಚಿಸುವಂತಹ, ಸದೃಢ ಸಮಾಜವನ್ನು ರೂಪಿಸುವಲ್ಲಿ ವೈಜ್ಞಾನಿಕ ಮನೋಭಾವದ ಜವಾಬ್ದಾರಿಯನ್ನು ಎತ್ತಿಹಿಡಿಯುವ ಪಠ್ಯಗಳನ್ನು ಆರಿಸಿಕೊಂಡು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವದ ಅಗತ್ಯ ಮತ್ತು ಮಹತ್ವ ಕುರಿತು ಅರಿವು ಮೂಡಿಸುವ ಉದ್ದೇಶ ಈ ಭಾಗದ್ದಾಗಿದೆ.

**ಘಟಕ –4 ಸಂಕೀರ್ಣ :**

ವಿಜ್ಞಾನದ ಜೊತೆಗೆ ಬದುಕಿನ ಇನ್ನಿತರ ಆಲೋಚನಾ ನೆಲೆಗಳನ್ನೂ ವಿದ್ಯಾರ್ಥಿಗಳಿಗೆ ತಲುಪಿದ ಆಶಯದಿಂದ ಸಂಕೀರ್ಣ ಎನ್ನುವ ಭಾಗವನ್ನು ಪಠ್ಯದಲ್ಲಿ ಅಳವಡಿಸಲಾಗಿದೆ. ಸಾಹಿತ್ಯ ಮತ್ತು ಸಾಮಾಜಿಕ ಸಂಸ್ಕೃತಿ ಹಾಗೂ ವೈಜ್ಞಾನಿಕತೆಯ ವಿವಿಧ ಆಯಾಮಗಳನ್ನು ಪ್ರಸ್ತಾಪಿಸುವ ಸಲುವಾಗಿ ಈ ಬಗೆಯ

ಓದಿನಿಂದ ಸಾಹಿತ್ಯಕ್ಕೆ ಇರುವ ಅನ್ಯಶಿಸ್ತುಗಳ ಜೊತೆಗಿನ ಒಡನಾಟ ಮತ್ತು ಅನನ್ಯತೆ ವಿದ್ಯಾರ್ಥಿಗಳಿಗೆ ಲಭಿಸುತ್ತದೆ.

- ವಿಜ್ಞಾನ ಮತ್ತು ಸಾಹಿತ್ಯ ಸಂಬಂಧಗಳು
- ಕನ್ನಡ ಭಾಷೆಯಲ್ಲಿ ವಿಜ್ಞಾನ ಬರೆಹಗಳ ಇತಿಹಾಸ
- ಇಬ್ಬರು ಬರಹಗಾರರ ಎರಡು ಲೇಖನಗಳು
  ಸಾಮಾಜಿಕ ಮತ್ತು ಮಾನವೀಯ ಮೌಲ್ಯಗಳ ಮಹತ್ವವನ್ನು ಸಾರುವ ಕನ್ನಡದ ಉತ್ತಮ ಬರಹಗಳು–ಈ ರೀತಿ ಇನ್ನಿತರ ಪಠ್ಯಗಳು

**ಪ್ರಥಮ ಚತುರ್ಮಾಸ ಬಿ.ಎಸ್ಸಿ. 2021–22ನೇ ಸಾಲಿನ ಕನ್ನಡ ಭಾಷಾ ಪಠ್ಯಪುಸ್ತಕ**

**ವಿಜ್ಞಾನ ಗಂಗೋತ್ರಿ – 1 ಎನ್.ಇ.ಪಿ ಪಠ್ಯಕ್ರಮ**

**ಘಟಕ : 1 ಕನ್ನಡ ನಾಡು ನುಡಿ ಚಿಂತನೆ**

| | |
|---|---|
| 1. ಅ. ಕನ್ನಡ ಪದಗೊಳ್ | – ಜಿ.ಪಿ. ರಾಜರತ್ನಂ |
| ಆ. ಬೆಂಕಿ ಬಿದ್ದಿದೆ ಮನೆಗೆ | – ಕಯ್ಯಾರ ಕಿಞ್ಞಣ್ಣ ರೈ |
| 2. ಹೊಯಿಸಳನ ದಳಪತಿ | – ಮಾಸ್ತಿ ವೆಂಕಟೇಶ ಅಯ್ಯಂಗಾರ್ |
| 3. ಕನ್ನಡ ದೀಕ್ಷೆ | – ಕುವೆಂಪು |

**ಘಟಕ : 2 ಭೂಮಿ**

| | |
|---|---|
| 1. ಅ. ಹೊನ್ನ ಬಿತ್ತೇವು ಹೊಲಕ್ಕೆಲ್ಲ | – ಜನಪದ |
| ಆ. ಚಿಗರಿಗಂಗಳ ಚೆಲುವಿ | – ದ.ರಾ. ಬೇಂದ್ರೆ |
| 2. ಕೆಂಪು ಗಿಣಿ | – ವಸುದೇಂದ್ರ |
| 3. ಬುಲ್ಡೋಜರ್ ಸಂಸ್ಕೃತಿ | – ನಾಗೇಶ್ ಹೆಗಡೆ |

**ಘಟಕ : 3 ವೈಜ್ಞಾನಿಕ ಮನೋಧರ್ಮ**

| | |
|---|---|
| 1. ಅ. ಒಂದೇ ಒಂದು ಬಾರಿ ಹೊರಬನ್ನಿ | – ಬಿ.ಟಿ. ಲಲಿತಾ ನಾಯಕ್ |
| ಆ. ಕತ್ತೆ ಮತ್ತು ಧರ್ಮ | – ಸಿದ್ದಲಿಂಗಯ್ಯ |
| 2. ಕರ್ವಾಲೊ (ಕಾದಂಬರಿಯ ಆಯ್ದ ಭಾಗ) | – ಕೆ.ಪಿ. ಪೂರ್ಣಚಂದ್ರ ತೇಜಸ್ವಿ |
| 3. ನಮ್ಮ ಅಳತೆಯನ್ನು ಮೀರಲಾರದ ದೇವರು | – ಕೆ. ಶಿವರಾಮ ಕಾರಂತ |

**ಘಟಕ : 4 ಸಂಕೀರ್ಣ**

| | |
|---|---|
| 1. ಅ. ಚರಿತ್ರೆಯೆಂದರೆ... | – ಎಚ್.ಎಸ್. ಅನುಪಮ |
| ಇ. ಎರಡು ಲೋಟಗಳು | – ಚೀಮನಹಳ್ಳಿ ರಮೇಶ್ ಬಾಬು |
| 2. 'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ' | – ಕೃಪಾಕರ ಸೇನಾನಿ |
| 3. ಸೌಂದರ್ಯ ಮತ್ತು ಮೈಬಣ್ಣ | – ರಾಮ ಮನೋಹರ ಲೋಹಿಯಾ |

**ಸಂಪಾದಕರು**

ಡಾ. ವಿಜಯಲಕ್ಷ್ಮಿ

**ಸಹ ಸಂಪಾದಕರು**

ಡಾ. ಎಸ್. ಇಂದಿರಮ್ಮ

ಡಾ. ಎಂ. ದೇವಮ್ಮಣ್ಣಿ

ಡಾ. ನಾಗರತ್ನಮ್ಮ

ಡಾ. ಜಯಶಂಕರ ಹಲಗೂರು

**ಬಿ.ಎಸ್ಸಿ.**

**ಸೆಮಿಸ್ಟರ್–2**

| | |
|---|---|
| Course Title | ಬಿ.ಎಸ್ಸಿ.–**ಕನ್ನಡ ಭಾಷಾ ಪತ್ಯ** |
| Total Contact Hourse : 52 to 56 | Course Credits : 03 |
| Formative Assessment Marks : 40 (CIE) | Duratin of ESA/Exam : 3 hours |
| Model Syllabus Authors : Multiple Authors | Summative Assessment Marks : 60 (SEE) |
| | |
| ವಿವರಗಳು | ಬೋಧನಾ ಅವಧಿ |
| ಘಟಕ–1 ಜೀವನ ಕಲೆ | 13/14 |
| ಘಟಕ–2 ಕನಸು | 13/14 |
| ಘಟಕ–3 ಮಳೆ | 13/14 |
| ಘಟಕ–4 ಸಂಕೀರ್ಣ | 13/14 |

**ಘಟಕ –1 ಜೀವನ ಕಲೆ :**

ಜೀವನವನ್ನು ಆನಂದಿಸುವುದು, ಸಾರ್ಥಕಗೊಳಿಸಿಕೊಳ್ಳುವುದು ಮೊದಲಾದ ಸಂಗತಿಗಳು ಬದುಕನ್ನು ಗೌರವಿಸುತ್ತಲೇ ಮನುಷ್ಯರು ತಮ್ಮನ್ನು ತಾವೇ ಗೌರವಿಸಿಕೊಳ್ಳುವ ಬಗೆಯೂ ಆಗಿದೆ. ದತ್ತವಾದ ಬದುಕನ್ನು ನಮಗೆ ಬೇಕಾದಂತೆ ರೂಪಿಸಿಕೊಳ್ಳುವ ಹೊಣೆಗಾರಿಕೆ ಅಂತಿಮವಾಗಿ ನಮ್ಮದೆ. ಅಲ್ಲಮ ಹೇಳುವ ಕೊಟ್ಟ ಕುದುರೆಯ ಪರಿಕಲ್ಪನೆ ಹಾಗೂ ಶಿವರಾಮ ಕಾರಂತರು ಹೇಳುವ ಬಾಳ್ವೆಯೇ ಬೆಳಕು, ಉಪನಿಷತ್ತುಗಳು ಹೇಳುವ ಅಮೃತಸ್ಯ ಪುತ್ರಾ ಪರಿಕಲ್ಪನೆಯಾಗಲಿ ಬದುಕಿನ ಮಹತ್ವನ್ನು ಹೇಳುತ್ತವೆ. ಬದುಕನ್ನು ಯಾಂತ್ರಿಕವಾಗಿ ವಿಧಿಬದ್ಧವಾಗಿ ಬದುಕುವುದು ಬೇರೆ. ಬದುಕಿನ ಪ್ರತಿ ಕ್ಷಣವನ್ನೂ ಆನಂದಿಸುತ್ತಾ ಬಾಳುವುದು ಬೇರೆ. ಇದರರ್ಥ ಬದುಕಿನ ಕಷ್ಟ, ದುಃಖ–ದುಮ್ಮಾನಗಳನ್ನು ಮರೆಯುವುದೆಂದಲ್ಲ. ಅವುಗಳನ್ನು ಮೀರಲು ಪ್ರಯತ್ನಿಸುವುದು. ಅಳು ನುಂಗಿ ನಗುವ ಅಸಾಧಾರಣ ಶಕ್ತಿಯನ್ನು ಪಡೆದುಕೊಳ್ಳುವುದು. ಇದು ಸಾಧ್ಯವಾಗುವುದು ಬದುಕನ್ನು ಕುರಿತ ನಿತಾಂತ ಪ್ರೀತಿಯಿಂದ. ಆಗ ಬದುಕು ಹಣೆಬರಹವಾಗದೆ ಕುಣಿತವಾಗುತ್ತದೆ, ಲೀಲೆಯಾಗುತ್ತದೆ, ಕಲೆಯಾಗುತ್ತದೆ.

ಈ ಮೂಲಕ ಬದುಕನ್ನು ಸ್ವೀಕರಿಸುವ ಮನೋಭಾವವನ್ನು ಬೆಳೆಸುವುದು ಈ ಘಟಕದ ಉದ್ದೇಶವಾಗಿದೆ ಅದಕ್ಕೆ ಪೂರಕವಾದ ಪಠ್ಯಗಳನ್ನು ಇಲ್ಲಿ ರೂಪಿಸಲಾಗಿದೆ.

**ಘಟಕ –2 ಕನಸು :**

ಮನುಷ್ಯ ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು ಆದರೆ, ಕನಸುಗಳಿಲ್ಲದ ದಾರಿಯಲ್ಲಿ ನಡೆಯಲಾರ ಎನ್ನುವುದು ವಾಸ್ತವದ ಸಂಗತಿಯಾಗಿದೆ. ನಾಗರಿಕತೆಯ ಅತ್ಯುನ್ನತ ಸಾಧನೆಗಳು, ಆವಿಷ್ಕಾರಗಳಿಂದ ಹಿಡಿದು ದೈನಂದಿನ ಬದುಕಿನ ಕ್ರಿಯಾಶೀಲತೆಯ ತನಕವೂ ಕನಸಿನ ಹರಹಿದೆ. ಕನಸುಗಳ ಬೆಂಬತ್ತುವುದೇ ಮನುಷ್ಯ ಬದುಕಿನ ಮೂಲ ಆಕರ್ಷಣೆಗಳಲ್ಲೊಂದಾಗಿದೆ. ಇದು ಮನುಷ್ಯರ ಶಕ್ತಿ ಮತ್ತು ಸಾಧ್ಯತೆಗಳಿಗೆ ಸಂಬಂಧಪಟ್ಟ ಸಂಗತಿಯೂ ಆಗಿದೆ. ಕನಸುಗಳು ದೊಡ್ಡದಾದಷ್ಟೂ ಮನುಷ್ಯ ಬದುಕಿನ ವೈವಿಧ್ಯತೆ ಮತ್ತು ವಿಸ್ತಾರಗಳು ಹೆಚ್ಚಾಗುತ್ತಾ ಹೋಗುತ್ತವೆ. ಮನುಷ್ಯ ಬದುಕಿನ ಸೌಂದರ್ಯವು ಹೆಚ್ಚಾಗುವುದು ಕೂಡ ಕನಸುಗಳ ಕಾರಣಕ್ಕಾಗಿಯೇ. ಕನಸುಗಳಿಲ್ಲದ ಮನುಷ್ಯರು ಮತ್ತು ಬದುಕು ಎರಡೂ ಬರಡಾಗುತ್ತದೆ. ಕನಸುಗಳಲ್ಲಿ ಹಗಲುಗನಸು ಎನ್ನುವ ಪರಿಕಲ್ಪನೆಯೂ ಇದೆ. ಇದು ಅಸಾಧ್ಯವಾದುದನ್ನು ಬಯಸುವ ಮನುಷ್ಯರ ಅತಿ ಆಸೆಯನ್ನು ಕುರಿತದ್ದು. ದತ್ತವಾದ ಈ ಬದುಕನ್ನು ಸುಂದರವಾಗಿಸಿಕೊಳ್ಳುವ, ಅರ್ಥಪೂರ್ಣವಾಗಿಸಿಕೊಳ್ಳುವ, ಸಾರ್ಥಕವಾಗಿಸಿಕೊಳ್ಳುವ ದಾರಿಯ ಆರಂಭವೇ ಕನಸು. ಆದ್ದರಿಂದ ಕನಸು ಎನ್ನುವುದು ಕೇವಲ ರಮ್ಯವಾದ ಸಂಗತಿ ಮಾತ್ರವಲ್ಲ, ಅದು ನಾವೆಲ್ಲರೂ ಕನಸು ಕಾಣುವ ಮತ್ತು ಅದನ್ನು ನನಸಾಗಿಸಿಕೊಳ್ಳುವ ಪ್ರಕ್ರಿಯೆಯೂ ಹೌದು. ಇದು ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಯ ಸಂಗಮಕ್ಕೆ ಕಾರಣವಾಗುವ ಮೂಲ ಸಂಗತಿಯಾಗಿದೆ. ಕನಸು ಮತ್ತು ಕಲ್ಪನೆಗಳ ನಡುವಿನ ಸಂಬಂಧವನ್ನೂ ಇಲ್ಲಿ ನಾವು ಗಮನಿಸಬಹುದು.

**ಘಟಕ –3 ಮಳೆ :**

ಗಾಂಧಿಯವರು ಹೇಳಿದಂತೆ ಮಳೆಯೆನ್ನುವುದು ಪ್ರಕೃತಿಯ ಅತ್ಯಂತ ಸುಂದರವಾದ ಸೃಷ್ಟಿ. ಮಳೆ ಇಲ್ಲದೆ ಮಾನವರಿಲ್ಲ, ಮಳೆಯು ಅದರ ಸೌಂದರ್ಯಕ್ಕಾಗಿ ಮಾತ್ರ ಮುಖ್ಯವಲ್ಲ. ಅದು ಜೀವಪೋಷಕವಾಗಿ ಇದಕ್ಕಿಂತಲೂ ಮುಖ್ಯ. ಆದ್ದರಿಂದಲೇ ಮಳೆಯನ್ನುಜನಪದರು ದೈವವೆಂದು ಪೂಜಿಸುತ್ತಾ ಬಂದಿದ್ದಾರೆ. ಮೋಡ ಬಿತ್ತನೆಯಂತಹ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸುತ್ತಿರುವುದು ತಂತ್ರಜ್ಞಾನದ ನೈಪುಣ್ಯವನ್ನು ಹೇಳುತ್ತದೆ. ಇದರ ಜೊತೆಗೆ ಮಳೆಯ ಮಹತ್ವವನ್ನು ಇದು ಸೂಚಿಸುತ್ತದೆ. ಮಳೆ ಮತ್ತು ರೈತರ ಸಂಬಂಧ ತಾಯಿ ಮಗುವಿನ ಸಂಬಂಧದಂತೆ ಜೀವಕೊರಳ ಗೆಳೆತನದ್ದು. ಅನಾವೃಷ್ಟಿ ಮತ್ತು ಅತಿವೃಷ್ಟಿ ದುರಂತ ಕಥನಗಳನ್ನೂ ಮಳೆ ಸೃಷ್ಟಿಸಿದೆ. ಮಳೆಯ ಸುಂದರ ಮುಖದೊಂದಿಗೆ ಅದರ ರೌದ್ರಮುಖವನ್ನು ಪರಿಚಯಿಸುವ ಪಠ್ಯಗಳನ್ನು ಇಲ್ಲಿ ರೂಪಿಸಿದೆ.

**ಘಟಕ –4 ಸಂಕೀರ್ಣ :**

- ಸಾಫ್ಟ್‌ವೇರ್ ತಂತ್ರಜ್ಞಾನ ಕುರಿತ ಕನ್ನಡ ಬರಹಗಳು
- ಓ.ಜಿ. ಶ್ರೀನಿಧಿ, ನಾಗೇಶ ಹೆಗಡೆ, ಹಾಲ್ದೊಡ್ಡೇರಿ ಸುಧೀಂದ್ರ, ಶೈಲಜಾ, ನೇಮಿಚಂದ್ರ ಲೇಖನ / ಕಥೆ/ ಪ್ರಬಂಧಗಳು.
- ಕುವೆಂಪು ಕನ್ನಡ ತಂತ್ರಾಂಶಕ್ಕೆ ತೇಜಸ್ವಿ ಬರೆದಿರುವ ಟಿಪ್ಪಣಿಗಳು ಈ ರೀತಿಯ ಇನ್ನಿತರ ಪಠ್ಯಗಳು

## ದ್ವಿತೀಯ ಚತುರ್ಮಾಸಬಿ.ಎಸ್ಸಿ. 2021–22ನೇ ಸಾಲಿನ ಕನ್ನಡ ಭಾಷಾ ಪಠ್ಯಪುಸ್ತಕ
## ವಿಜ್ಞಾನ ಗಂಗೋತ್ರಿ – 2 ಎನ್.ಇ.ಪಿ ಪಠ್ಯಕ್ರಮ

**ಘಟಕ : 1 ಜೀವನ ಕಲೆ**

1. ಅ. ಸಂಬಳದ ಸಂಜೆ – ಕೆ.ಎಸ್. ನರಸಿಂಹಸ್ವಾಮಿ
   ಆ. ಅವ್ವ – ಪಿ. ಲಂಕೇಶ್
2. ಕಾಮನ ಹುಣ್ಣಿಮೆ (ಕಾದಂಬರಿಯ ಆಯ್ದ ಭಾಗ) – ನಟರಾಜ್ ಹುಳಿಯಾರ್
3. ಬದುಕು ಬದಲಿಸಬಹುದು – ನೇಮಿಚಂದ್ರ

**ಘಟಕ : 2 ಕನಸು**

1. ಅ. ತಿರುಕನೋರ್ವನೂರಮುಂದೆ – ಮುಪ್ಪಿನ ಷಡಕ್ಷರಿ
   ಆ. ಎಲ್ಲ ಹುಡುಗಿಯರ ಕನಸು – ಸವಿತಾ ನಾಗಭೂಷಣ
2. ಒಂದು ಹುಡುಗನಿಗೆ ಬಿದ್ದ ಕನಸು – ಬೆಸಗರಹಳ್ಳಿ ರಾಮಣ್ಣ
3. ಕನಸು ಕಾಣಿರಿ– ಕನಸುಗಳ ಶಕ್ತಿ – ಎ.ಪಿ.ಜೆ. ಅಬ್ದುಲ್ ಕಲಾಂ

**ಘಟಕ : 3 ಮಳೆ**

1. ಅ) ತೆಂಕಣಗಾಳಿಯಾಟ – ಪಂಜೆ ಮಂಗೇಶರಾಯ
   ಆ) ಮಳೆ – ಜಿ.ಎಸ್. ಶಿವರುದ್ರಪ್ಪ
2. ಬರ – ಯು.ಆರ್. ಅನಂತಮೂರ್ತಿ
3. ಆದ್ರೆ ಮಳೇಲಿ ಆದ ಗಂಡ – ನೆಂಪೆ ದೇವರಾಜ್

**ಘಟಕ : 4 ಸಂಕೀರ್ಣ**

1. ನಾಗರಿಕತೆ ಬರೆದ ಜರವಾ ಚಿತ್ರ – ರಹಮತ್ ತರೀಕೆರೆ
2. ಕನ್ನಡದ ಮಕ್ಕಳಿಗೆ ಬೇಕಿರುವ ಕಂಪ್ಯೂಟರ್ ಶಿಕ್ಷಣ – ಎನ್.ಎ.ಎಂ. ಇಸ್ಮಾಯಿಲ್
3. ಮಾಹಿತಿ ತಂತ್ರಜ್ಞಾನ ಮತ್ತು ಕನ್ನಡ – ಟಿ.ಜಿ. ಶ್ರೀನಿಧಿ

**ಸಂಪಾದಕರು**

ಡಾ. ವಿಜಯಲಕ್ಷ್ಮಿ

**ಸಹ ಸಂಪಾದಕರು**

ಡಾ. ಎಸ್. ಇಂದಿರಮ್ಮ

ಡಾ. ಎಂ. ದೇವಮ್ಮಣ್ಣಿ

ಡಾ. ನಾಗರತ್ನಮ್ಮ

ಡಾ. ಜಯಶಂಕರ ಹಲಗೂರು

**ಬಿ.ಕಾಂ.**

**ಸೆಮಿಸ್ಟರ್–1**

| | |
|---|---|
| Course Title | ಬಿ.ಕಾಂ.–**ಕನ್ನಡ ಭಾಷಾ ಪಠ್ಯ** |
| Total Contact Hourse : 52 to 56 | Course Credits : 03 |
| Formative Assessment Marks : 40 (CIE) | Duratin of ESA/Exam : 3 hours |
| Model Syllabus Authors : Multiple Authors | Summative Assessment Marks : 60 (SEE) |
| | |
| ವಿವರಗಳು | ಬೋಧನಾ ಅವಧಿ |
| ಘಟಕ–1 ಕನ್ನಡ ನಾಡು–ನುಡಿ–ಚಿಂತನೆ | 13/14 |
| ಘಟಕ–2 ಸಂಸ್ಕೃತಿ | 13/14 |
| ಘಟಕ–3 ಜಾಗತೀಕರಣ | 13/14 |
| ಘಟಕ–4 ಸಂಕೀರ್ಣ | 13/14 |

**ಘಟಕ –1 ಕನ್ನಡ ನಾಡು–ನುಡಿ–ಚಿಂತನೆ :**

ಕನ್ನಡ ನಾಡು ರೂಪುಗೊಂಡದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯತೆ, ಅದರ ಲೋಕದೃಷ್ಟಿ, ಕಲಾ ಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸ್ವೋಪಜ್ಞತೆ, ಅದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಪಠ್ಯವನ್ನು ರೂಪಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ನಾಡು –ನುಡಿ ಕುರಿತ ಅಭಿಮಾನವನ್ನು ಜಾಗೃತಗೊಳಿಸುವುದು ಈ ಘಟಕದ ಉದ್ದೇಶವಾಗಿರುತ್ತದೆ.

**ಘಟಕ –2 ಸಂಸ್ಕೃತಿ :**

ಸಂಸ್ಕೃತಿಯನ್ನು ಅರ್ನಾಲ್ಡ್ ಬೆಳಕು ಮತ್ತು ಮಾಧುರ್ಯ ಎಂದು ಕರೆಯುತ್ತಾನೆ. ಮಾನವ ಸಮುದಾಯವು ಅಪಾರ ಶ್ರದ್ಧೆ, ಶ್ರಮ ಮತ್ತು ಪ್ರೀತಿಯಿಂದ ಸಂಸ್ಕೃತಿಯನ್ನು ರೂಪಿಸುತ್ತಿರುತ್ತದೆ. ಸಂಸ್ಕೃತಿ

ಎನ್ನುವುದು ಜೀವನ ಮೌಲ್ಯಗಳು, ಕಲೆಗಳು, ಸಾಂಸ್ಕೃತಿಕ ಆಚರಣೆಗಳು, ರಾಜಕೀಯ ಹಾಗೂ ಧಾರ್ಮಿಕ ವ್ಯವಸ್ಥೆ ಈ ಎಲ್ಲವನ್ನೂ ಒಳಗೊಂಡಿರುತ್ತದೆ. ಬದುಕನ್ನು ಒಳಗಿನಿಂದಲೂ, ಹೊರಗಿನಿಂದಲೂ ಸಮೃದ್ಧಗೊಳಿಸುವ ಎಲ್ಲ ಅಂಶಗಳನ್ನೂ ನಾವು ಸಂಸ್ಕೃತಿ ಎಂದು ಕರೆಯಬಹುದು. ಸಕಲ ಜೀವ ಜಾತರನ್ನು ಗೌರವಿಸುವ, ಒಳಗೊಳ್ಳುವ, ಅವರ ಅಸ್ಮಿತೆ ಮತ್ತು ಅಸ್ತಿತ್ವಗಳನ್ನು ಒಪ್ಪುವುದನ್ನು, ಭಿನ್ನವಿದ್ದೂ ಬೆರೆಯುವುದನ್ನು, ಮಾನವ ಸಹಜ ದೌರ್ಬಲ್ಯಗಳನ್ನು ಮೀರಲು ಪ್ರಾಮಾಣಿಕ ಪ್ರಯತ್ನ ನಡೆಸುವುದನ್ನು ಸಂಸ್ಕೃತಿಯ ಪ್ರಕ್ರಿಯೆ ಎಂದು ಕರೆಯಬಹುದು. ಸಂಸ್ಕೃತಿ ಸಂಬಂಧಿ ಪಠ್ಯಗಳನ್ನು ಇಲ್ಲಿ ಕೊಡುವ ಮೂಲಕ ವಿದ್ಯಾರ್ಥಿಗಳಲ್ಲಿ ಸಂಸ್ಕೃತಿಯ ಬೆಳಕು ಮತ್ತು ಮಾಧುರ್ಯವನ್ನು ಬೆಳೆಸುವ ಉದ್ದೇಶವಿದೆ.

**ಘಟಕ –3 ಜಾಗತೀಕರಣ :**

ಜಾಗತೀಕರಣವು ಸಮಕಾಲೀನ ಜಾಗತಿಕ ವಿದ್ಯಮಾನವಾಗಿದ್ದು, ಅದು ಇಂದು ಆಯ್ಕೆಯಾಗಿ ಉಳಿದಿಲ್ಲ. ಅದು ಬೇಕಾಗಿ ಬೇಡವಾಗಿ ಎಲ್ಲ ರಾಷ್ಟ್ರಗಳೂ ಅನಿವಾರ್ಯವಾಗಿ ಒಳಗಾಗುತ್ತಿರುವ ಒಂದು ಪ್ರಕ್ರಿಯಯಾಗಿದೆ. ಇಡೀ ವಿಶ್ವವನ್ನೇ 'ಏಕತಾಣ'ವಾಗಿ, 'ವಿಶ್ವಹಳ್ಳಿ'ಯಾಗಿ ರೂಪಿಸುವುದು ಇದರ ಉದ್ದೇಶವಾಗಿದೆ. ಆದರೆ ಇದರ ಪರಿಣಾಮವು ಮಾತ್ರ ಇದಕ್ಕೆ ವಿರುದ್ಧವಾಗಿದೆ. ಇದರ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಅಂಶಗಳನ್ನು ಪಠ್ಯಗಳಾಗಿ ಇಡುವ ಮೂಲಕ ವಿದ್ಯಾರ್ಥಿಗಳಲ್ಲಿ ಸಮಕಾಲೀನ ಆಗುಹೋಗುಗಳನ್ನು ಕುರಿತ ಅರಿವನ್ನು ಹೆಚ್ಚಿಸಬಹುದಾಗಿದೆ. ಸಂಸ್ಕೃತಿಗಳ ವೈವಿಧ್ಯತೆ, ಜೀವಂತಿಕೆಯನ್ನು ನಾಶ ಮಾಡುತ್ತಾ ಏಕರೂಪಿ ಸಂಸ್ಕೃತಿಯನ್ನು ಇದು ರೂಪಿಸುತ್ತಿದೆ. ಆಹಾರ ವಸ್ತ್ರ, ಕ್ರೀಡೆ, ಸಾಂಸ್ಕೃತಿಕ ಆಚರಣೆಗಳು, ದೈನಂದಿನ ಬಳಕೆಯ ಉತ್ಪನ್ನಗಳು ಈ ಎಲ್ಲದರ ಮೇಲೂ ಬಲಾಢ್ಯ ರಾಷ್ಟ್ರಗಳ ಆಕ್ರಮಣವಾಗುತ್ತಿದೆ ಭಾರತವೂ ಸೇರಿದಂತೆ ಮೂರನೇ ಜಗತ್ತಿನ ರಾಷ್ಟ್ರಗಳು ಇದರ ಮೂಲ ಬಲಿಪಶುಗಳಾಗುತ್ತಿವೆ ಎನ್ನುವುದನ್ನು ನಾವು ಅವಶ್ಯವಾಗಿ ಗಮನಿಸಬೇಕು. ಅನೇಕತೆಯಲ್ಲಿ ಏಕತೆ ಎನ್ನುವ ಜನತಾಂತ್ರಿಕ ಆಶಯಕ್ಕೆ ವಿರುದ್ಧವಾಗಿ ಏಕತೆಯ ದಬ್ಬಾಳಿಕೆಯ ಮೂಲಕ ಅನೇಕ ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳನ್ನೇ ನಾಶ ಮಾಡುವ ಮೂಲಕ ಹಲವು ವೃತ್ತಿಗಳನ್ನೇ ಇದು ವಿನಾಶದಂಚಿಗೆ ತಳ್ಳುತ್ತಿದೆ ಎನ್ನುವ ಅಂಶವನ್ನೂ ಗಮನಿಸಬೇಕು. ಅಮಾನವೀಯ ಮಾನೋವಿನ್ಯಾಸವನ್ನೂ ಏಕರೂಪ ವಿನ್ಯಾಸ ಇದು ರೂಪಿಸುತ್ತಿದೆ. ಇಲ್ಲಿ ಮನೋವಿನ್ಯಾಸದ ಅಪಾಯಗಳನ್ನು ಮನವರಿಕೆ ಮಾಡಿಸುವ ವೈವಿಧ್ಯಮಯವಾದ ಮತ್ತು ಬಹುತ್ವದ ಜೀವಂತಿಕೆಯನ್ನು ವೇದ್ಯಗೊಳಿಸುವ ಪಠ್ಯಗಳನ್ನು ಇಲ್ಲಿ ಕೊಡಲಾಗುವುದು.

**ಘಟಕ –4 ಸಂಕೀರ್ಣ :**

ಸಾಹಿತ್ಯ ಮತ್ತು ವಾಣಿಜ್ಯ ಅಂಶಗಳ ಸಂಬಂಧಗಳು, ಕನ್ನಡ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ವ್ಯಾಪಾರಿ, ವ್ಯಾಪಾರ ಮನೋಭಾವ ವ್ಯಾಪಾರದಲ್ಲಿ ಧರ್ಮ, ಮಾನವೀಯತೆಯ ಚಿತ್ರಣಗಳು.

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಣಗಳ್ಲಿ ಬಿಂಬಿತವಾಗಿರುವ ವಾಣಿಜ್ಯ ಮತ್ತು ಸಂಬಂಧಿತ ಅಂಶಗಳನ್ನು ಬೋಧಿಸುವುದು.

**ಪ್ರಥಮ ಚತುರ್ಮಾಸ ಬಿ.ಕಾಂ., 2021–22ನೇ ಸಾಲಿನ ಕನ್ನಡ ಭಾಷಾ ಪಠ್ಯಪುಸ್ತಕ**

**ವಾಣಿಜ್ಯ ಗಂಗೋತ್ರಿ–1 ಎನ್.ಇ.ಪಿ ಪಠ್ಯಕ್ರಮ**

**ಘಟಕ–1 ಕನ್ನಡ ನಾಡು – ನುಡಿ ಚಿಂತನೆ**

1. ಅ)ಕನ್ನಡಾಂಬೆಯ ಹಿರಿಮೆ (ಕವನ) – ಬೆನಗಲ್ ರಾಮರಾವ್
   ಆ) ಕರ್ನಾಟಕ ರಾಜ್ಯೋತ್ಸವ (ಕವನ) – ಕೆ.ಎಸ್. ನರಸಿಂಹಸ್ವಾಮಿ
2. ವೀರಮಾನ್ಯ (ಕಥೆ) – ಬೆಟಗೇರಿ ಕೃಷ್ಣಶರ್ಮ
3. ಕರ್ನಾಟಕ: ಇಟ್ಟ ಹೆಸರು ಕೊಟ್ಟ ಮಂತ್ರ (ಲೇಖನ) – ಕುವೆಂಪು

**ಘಟಕ–2 ಸಂಸ್ಕೃತಿ**

1. ಅ) ಅಮ್ಮ, ಆಚಾರ ನಾನು (ಕವನ) – ಕೆ.ಎಸ್. ನಿಸಾರ್ ಅಹಮದ್
   ಆ) ಹಂಪೆಯಲ್ಲಿ (ಕವನ)– ಜಿ.ಎಸ್. ಶಿವರುದ್ರಪ್ಪ
2. ಹಬ್ಬಗಳು (ಪ್ರಬಂಧ) – ಪ್ರೊ.ಡಿ.ಕೆ. ರಾಜೇಂದ್ರ
3. ನಮ್ಮ ಸಂಸ್ಕೃತಿಯ ಹೆಮ್ಮೆ ಸಾಲದು (ಲೇಖನ) – ಕೆ. ಶಿವರಾಮ ಕಾರಂತ

**ಘಟಕ–3 ಜಾಗತೀಕರಣ**

1. ಅ) ಗಿರಣಿ ವಿಸ್ತಾರ ನೋಡಮ್ಮ (ತತ್ವಪದ) – ಶಿಶುನಾಳ ಶರೀಫ
   ಆ) ನನ್ನ ಶಾಲೆ (ಕವನ) – ಜ.ನಾ. ತೇಜಶ್ರೀ
2. ಹುಲಿ ಸವಾರಿ (ಕಥೆ) – ವಿವೇಕಶಾನಬಾಗ್
3. ಜಾಗತೀಕರಣ ಮತ್ತು ಸಂಸ್ಕೃತಿ (ಲೇಖನ) – ರಂಗಾರೆಡ್ಡಿ ಕೋಡಿರಾಂಪುರ

**ಘಟಕ – 4 ಸಂಕೀರ್ಣ**

1. ಅ) ದಿಕ್ಕಿಲ್ಲದ ಹಾಡು (ಕವನ) – ಡಾ. ಚೆನ್ನಣ್ಣವಾಲೀಕಾರ
   ಆ) ಪೂರ್ಣತೆಯ ಪರಮ ಕಲೆ (ಚೌಪದಿಗಳು) – ಕೆ.ಸಿ. ಶಿವಪ್ಪ
2. ಕುಣಿಯುವ ಕುರುಡ ಕಾಂಚಾಣ (ಕಥನ) – ಪ್ರೊ.ಜಿ. ಚಂದ್ರಶೇಖರ
3. ಮೌಲ್ಯಗಳ ಪಾಲನೆ (ಲೇಖನ) – ಎಪಿಜೆ ಅಬ್ದುಲ್ ಕಲಾಂ

**ಪ್ರಧಾನ ಸಂಪಾದಕರು**
ಡಾ. ವಿಜಯಕುಮಾರಿ ಎಸ್. ಕರಿಕಲ್

**ಸಂಪಾದಕರು**
ಡಾ. ಕೆ. ತಿಮ್ಮಯ್ಯ

**ಸಹ ಸಂಪಾದಕರು**
ಡಾ. ಟಿ.ಕೆ. ಕೆಂಪೇಗೌಡ
ಡಾ. ಎಂ.ಬಿ. ಸುರೇಶ
ಡಾ. ಬಿ.ಪಿ. ಆಶಾಕುಮಾರಿ
ಶ್ರೀ ವಿಜಯ ಹನೂರು

**ಬಿ.ಕಾಂ.**

**ಸೆಮಿಸ್ಟರ್–2**

| | |
|---|---|
| Course Title | ಬಿ.ಕಾಂ.–**ಕನ್ನಡ ಭಾಷಾ ಪತ್ಯ** |
| Total Contact Hourse : 52 to 56 | Course Credits : 03 |
| Formative Assessment Marks : 40 (CIE) | Duratin of ESA/Exam : 3 hours |
| Model Syllabus Authors : Multiple Authors | Summative Assessment Marks : 60 (SEE) |
| | |
| ವಿವರಗಳು | ಬೋಧನಾ ಅವಧಿ |
| ಘಟಕ–1 ಸೌಂದರ್ಯ | 13/14 |
| ಘಟಕ–2 ಭಕ್ತಿ | 13/14 |
| ಘಟಕ–3 ದೇಸಿಯತೆ | 13/14 |
| ಘಟಕ–4 ಸಂಕೀರ್ಣ | 13/14 |

**ಘಟಕ –1 ಸೌಂದರ್ಯ :**

ಸೌಂದರ್ಯ ಎನ್ನುವುದು ಮನುಷ್ಯನ ಕಲ್ಪನೆಯೂ ಹೌದು. ಪ್ರಕೃತಿಯ ಕಾಲಾತೀತ ವಾಸ್ತವವೂ ಹೌದು. ಸೌಂಧರ್ಯವು ವಸ್ತುವಿನಲ್ಲಿದೆಯೂ ನೋಡುವ ಕಣ್ಣಿನಲ್ಲಿದೆಯೋ ಎನ್ನುವುದು ಬೀಜ ವೃಕ್ಷ ನ್ಯಾಯದಷ್ಟು ಆದಿಮವಾದುದು. ಸೌಂದರ್ಯ ಮೀಮಾಂಸೆಯನ್ನೂ ಮಾನವ ನಾಗರಿಕತೆ ಬಲು ಶ್ರದ್ಧೆಯಿಂದ, ಪ್ರೀತಿಯಿಂದ ಕಟ್ಟಿದೆ. ಮನಸ್ಸಿನ ಸೌಂದರ್ಯಕ್ಕೂ ವಸ್ತು ಸೌಂದರ್ಯಕ್ಕೂ ಇರುವ ಸಂಬಂಧವನ್ನು ಹೇಳುವ ಪಠ್ಯಗಳನ್ನು ಆರಿಸಬಹುದು. ದೈಹಿಕವಾದ ಸೌಂದರ್ಯ ಮಾದರಿಗಳಿಂದ ಹಿಡಿದು ಪ್ರಾಕೃತಿಕ ಸೌಂದರ್ಯದ ತನಕ, ವಾಸ್ತುಶಿಲ್ಪದ ಸೌಂದರ್ಯದಿಂದ ಹಿಡಿದು ಮನೆಯ ಒಳಾಂಗಣದ ಸೌಂದರ್ಯದ ತನಕ, ಸಾಹಿತ್ಯಕ ಪಠ್ಯಗಳ ಸೌಂದರ್ಯ ಮೀಮಾಂಸೆಯ ತನಕ ಪಠ್ಯಗಳನ್ನು ಆರಿಸಬಹುದು. ಸೌಂದರ್ಯಾಭಿರುಚಿ ಎಂದರೇನು ಎನ್ನುವುದರ ಬಗ್ಗೆಯೂ ಪಠ್ಯಗಳನ್ನು ಆರಿಸಬಹುದು. ಸೌಂದರ್ಯದ ಅತಿ ಮೋಹವು ವ್ಯಸನವೂ ಆಗಬಹುದು ಎನ್ನುವುದನ್ನೂ ಅವಶ್ಯವಾಗಿ ಗಮನಿಸಬಹುದು. ಸೌಂದರ್ಯ ಪ್ರಜ್ಞೆ ಹೆಣ್ಣಿನ ದೌರ್ಬಲ್ಯ ಎನ್ನುವ ಮಿಥ್ಯೆಯ ಬಗೆಗೂ ಚರ್ಚಿಸಬಹುದು. ಅದನ್ನು ಒಂದು ವಿಶೇಷ ಸಂವೇದನೆಯಾಗಿ ನೋಡುವ ಸಾಧ್ಯತೆಯೂ ಇದೆ. ಈ ಎಲ್ಲ ಸಂಗತಿಗಳನ್ನು

ಕುರಿತಂತಹ ಪಠ್ಯಗಳನ್ನು ಇಡುವ ಮೂಲಕ ವಿದ್ಯಾರ್ಥಿಗಳ ಸೌಂದರ್ಯದ ಬಗೆಗಿನ ಹಲವು ಆಯಾಮಗಳನ್ನು ಅನಾವರಣಗೊಳಿಸುವುದು ಈ ಘಟಕದ ಉದ್ದೇಶವಾಗಿದೆ.

**ಘಟಕ –2 ಭಕ್ತಿ :**

ಭಕ್ತಿಯನ್ನು ಮನುಷ್ಯರ ಮೂಲಧಾತು ಅಥವಾ ಮೂಲಭಾವಗಳಲ್ಲಿ ಒಂದೆಂದು ತಿಳಿಯಲಾಗಿದೆ. ಮನುಷ್ಯರ ದೌರ್ಬಲ್ಯವಾಗಿಯೂ ಕೆಲವೊಮ್ಮೆ ಭಕ್ತಿಯನ್ನು ವ್ಯಾಖ್ಯಾನಿಸಲಾಗಿದೆ. ಅನುಭಾವದ ಪರಮ ಸಿದ್ಧಿಯ ನೆಲೆಯಾಗಿಯೂ ಭಕ್ತಿಯನ್ನು ನೋಡಲಾಗಿದೆ. ಮೇಲ್ನೋಟಕ್ಕೆ ಭಕ್ತಿಯು ಅತ್ಯಂತ ಸರಳವಾದ ಸಂಗತಿಯಾಗಿ ಕಂಡರೂ ನಿಜದಲ್ಲಿ ಇದು ಹೋಗುತ್ತ ಕೊಯ್ಯುವ ಬರುತ್ತ ಕೊಯ್ಯುವ ಸಂಗತಿ. ಏಕೆಂದರೆ, ಭಕ್ತಿ ಎನ್ನುವುದು ಮನುಷ್ಯರು ತಮ್ಮ ಅಹಂಕಾರವನ್ನು ಕಳೆದುಕೊಳ್ಳುತ್ತಾ ಹೋಗುವ ಅತ್ಯಂತ ಕಷ್ಟದ ಪ್ರಯಾಣವಾಗಿದೆ. ತನ್ನ ಅಸ್ತಿತ್ವವನ್ನೇ ನಿಧಾನವಾಗಿ ಲಯವಾಗಿಸಿಕೊಳ್ಳುತ್ತಾ ತಾನು ನಂಬಿದ ದೈವ ಅಥವಾ ಅತಿಮಾನುಷ ಶಕ್ತಿಯೊಂದಕ್ಕೆ ತನ್ನನ್ನು ಶರಣಾಗಿಸಿಕೊಳ್ಳುವುದು ಸುಲಭದ ವಿಷಯವಲ್ಲ. ಆದ್ದರಿಂದಲೇ ಭಕ್ತ ಕವಿಗಳ ಅಭಿವ್ಯಕ್ತಿಗಳಿಗೆ ಅಂಥ ತೀವ್ರತೆ ಮತ್ತು ಅನುರಕ್ತಿ ಇರುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ ಎಂಬಂತೆ ಡಾಂಭಿಕ ಭಕ್ತಿ ಮತ್ತು ಶೋಷಣೆಯ ನೆಲೆಗಳೂ ಅಷ್ಟೇ ಪ್ರಧಾನವಾಗಿ ನಮ್ಮ ಸಮುದಾಯದಲ್ಲಿ ಚಾಲ್ತಿಯಲ್ಲಿವೆ. ಅಂತರಂಗದ ಭಕ್ತಿಯ ವೈಯಕ್ತಿಕ ನೆಲೆಯನ್ನು ಬಿಟ್ಟು ಬಹಿರಂಗದ, ಲಜ್ಜಾಹೀನ ಸಾರ್ವಜನಿಕ ಪ್ರದರ್ಶನವಾಗಿಸಿಕೊಳ್ಳುವ, ಆ ಮೂಲಕ ಇತರರನ್ನು ಶೋಷಿಸುವ, ಹಾದಿ ತಪ್ಪಿಸುವ ವಾಸ್ತವಗಳನ್ನು ಕುರಿತ ಎಚ್ಚರಿಕೆಯನ್ನೂ ವಿದ್ಯಾರ್ಥಿಗಳಿಗೆ ಕೊಡುವುದು ಅವಶ್ಯ. ಈ ಎರಡೂ ನೆಲೆಗಳನ್ನು ಒಳಗೊಳ್ಳುವ ಪಠ್ಯಗಳನ್ನು ಆರಿಸಿ ಸಂಯೋಜಿಸಿದೆ.

**ಘಟಕ –3 ದೇಸೀಯತೆ :**

ಜಾಗತೀಕರಣವು ತನ್ನ ದಟ್ಟ ಪ್ರಭಾವಗಳನ್ನು ಚಾಚುತ್ತಿದ್ದಾಗ, ಹಿನ್ನೆಲೆಯಲ್ಲಿದ್ದ ದೇಸೀಯತೆಯು ಮುನ್ನೆಲೆಗೆ ಬಂದಿತು. ಜಾಗತೀಕರಣಕ್ಕೆ ಪರ್ಯಾಯವಾಗಿ, ಪರಿಹಾರವಾಗಿಯೂ ದೇಸೀಯತೆಯನ್ನು ಪ್ರಯೋಗಿಸುವ ಮಹತ್ವದ ಪ್ರಯತ್ನದಲ್ಲಿ ಮೂರನೇ ಜಗತ್ತಿನ ರಾಷ್ಟ್ರಗಳು ತೊಡಗಿವೆ. ಈ ಅಂಶಗಳಿಗೆ ಒತ್ತು ಕೊಟ್ಟು ಪಠ್ಯಗಳನ್ನು ರೂಪಿಸಿಕೊಳ್ಳುವುದು. ಮಾತ್ರವಲ್ಲ, ನಾಶವಾಗುತ್ತಿರುವ ದೇಸೀ ಪದ್ಧತಿಗಳನ್ನು ಪುನರುಜ್ಜೀವಿಸುವ ಪ್ರಯತ್ನಗಳಾಗಿಯೂ ಇವುಗಳನ್ನು ನೋಡಬೇಕು. ವಿದ್ಯಾರ್ಥಿಗಳಲ್ಲಿ ಸಂಸ್ಕೃತಿ, ದೇಸೀಯತೆ, ಸ್ಥಳೀಯತೆ, ಗ್ರಾಮೀಣ ಕೈಗಾರಿಕೆಗಳು ಮತ್ತು ಕರಕುಶಲ ಉತ್ಪನ್ನಗಳ ಬಗೆಗೆ ಅರಿವನ್ನು ಮೂಡಿಸುವ ಪಠ್ಯಗಳನ್ನು ಆರಿಸುವುದು. ಗುಡಿ ಕೈಗಾರಿಕೆಗಳನ್ನು ಜೀವಂತವಾಗಿಸುವುದು ಎಂದರೆ ಅದು ಸ್ಥಳೀಯ ಆರ್ಥಿಕ ಮೂಲಗಳನ್ನು ಮತ್ತೆ ಕಟ್ಟುವ ಮಹತ್ವದ ಆರ್ಥಿಕ ಸಂಗತಿಯೂ ಹೌದು ಎನ್ನುವುದನ್ನು ಮನದಟ್ಟು ಮಾಡಿಸಿಕೊಡುವುದು. ಕೈಮಗ್ಗ, ದೇಸೀತಳಿಗಳು, ಸಾಂಸ್ಕೃತಿಕ ಆಚರಣೆಗಳು, ಸಂಸ್ಕೃತಿ ಅಂಶಗಳು ಈ ಎಲ್ಲವನ್ನೂ ಪಠ್ಯದಲ್ಲಿ ಸೇರಿಸುವುದು ಅಪೇಕ್ಷಣೀಯವಾಗಿದೆ. ದೇಸಿಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಮೂಲಕ ಸ್ಥಳೀಯ ಅಂಕಗಳಿಗೆ ಮಹತ್ವದ ಬಗೆಗೆ ಅರಿವು ಮೂಡಿಸುವುದು ಈ ಘಟಕದ ಉದ್ದೇಶವಾಗಿರುತ್ತದೆ.

**ಘಟಕ –4 ಸಂಕೀರ್ಣ :**

ವಾಣಿಜ್ಯ ಪತ್ರಗಳನ್ನು ಬರೆಸುವುದು, ವರದಿಗಳನ್ನು ತಯಾರಿಸುವುದು, ವಾಣಿಜ್ಯ ವಿಷಯದ ಲೇಖನಗಳಣ್ನು ಬರೆಯಲು ಉತ್ತೇಜಿಸುವುದು, ಪ್ರಮುಖ ವಾಣಿಜ್ಯ ವ್ಯಕ್ತಿಗಳ ಪರಿಚಯ ಮಾಡಿಕೊಡುವುದು.

ಕುವೆಂಪು, ಕಾರಂತರ ಕಾದಂಬರಿಗಳಲ್ಲಿ ಗೇಣಿ ಪದ್ಧತಿ, ಜೀತ ಪದ್ಧತಿ, ಆರ್ಥಿಕ ಅಸಹಾಯಕತೆ ಮುಂತಾದವುಗಳನ್ನು ವಿವರಿಸುವ ಭಾಗಗಳು–ಈ ರೀತಿ ಇನ್ನಿತರ ಪಠ್ಯಗಳು.

## ದ್ವಿತೀಯ ಚತುರ್ಮಾಸ ಬಿ.ಕಾಂ. –2021–22ನೇ ಸಾಲಿನ ಕನ್ನಡ ಪಠ್ಯಪುಸ್ತಕ
## ವಾಣಿಜ್ಯ ಗಂಗೋತ್ರಿ – 2 ಎನ್.ಇ.ಪಿ. ಪಠ್ಯಕ್ರಮ

**ಘಟಕ : 1 ಸೌಂದರ್ಯ**

1. ಅ) ಇಬ್ಬನಿಯ ಅವತಾರ – ಕುವೆಂಪು
   ಆ) ಹಳ್ಳಿಯ ಹೂಗಳಿಗೆ – ಡಿ.ಎಸ್.ಕರ್ಕಿ
2. ಕಿವಿಯ ಮೂಲಕ ಒಂದು ದಿನ – ಪು.ತಿ.ನ
3. ಸೌಂದರ್ಯ ಮತ್ತು ಮೈಬಣ್ಣ – ರಾಮಮನೋಹರ ಲೋಹಿಯಾ (ಅನು:ಕೆ.ವಿ.ಸುಬ್ಬಣ್ಣ)

**ಘಟಕ : 2 ಭಕ್ತಿ**

1. ಅ) ಭಕ್ತಿಯೆಂಬ ಪೃಥ್ವಿಯ ಮೇಲೆ..(ವಚನಗಳು) – ಬಸವೇಶ್ವರ
   ಆ) ಭೋಗ ಹರಿದು ಹೋಗಲಿ (ಕೈವಲ್ಯಪದ) – ಮುಪ್ಪಿನ ಷಡಕ್ಷರಿ
1. ಹರಕೆಗಳು (ಪ್ರಬಂಧ) – ಎ.ಎನ್.ಮೂರ್ತಿರಾವ್
2. ಭಕ್ತಿ ಹೃದಯ – ದೇವ ನಿಲಯ (ಚಿಂತನ) – ಶ್ರೀ ಸಿದ್ದೇಶ್ವರ ಸ್ವಾಮಿಗಳು

**ಘಟಕ : 3 ದೇಸಿಯತೆ**

1. ಅ) ಗ್ರಾಮದೇವತೆ – ಡಾ.ಸಿದ್ದಲಿಂಗಯ್ಯ
   ಆ) ನೆಲಮೂಲ – ಎಸ್.ಜಿ.ಸಿದ್ಧರಾಮಯ್ಯ2
2. ಕಥೆ ಹೇಳು ಗುಬ್ಬಚ್ಚಿ ನಿನ್ನ ವ್ಯಥೆಯ ಕಥೆ ಹೇಳು – ಕೆ.ಎಸ್. ನಿಸಾರ್ ಅಹಮದ್
3. ಬೇಸಾಯ, ಹಬ್ಬಗಳ ರಂಗು, ಬಾಬಯ್ಯನ ಜಾತ್ರೆ, ಅಂಗದನ ಪಾತ್ರ – ತುಂಬಾಡಿ ರಾಮಯ್ಯ
   (ಮಣೆಗಾರ–ಆತ್ಮಕತೆಯ ಆಯ್ದ ಭಾಗ)

**ಘಟಕ : 4. ಸಂಕೀರ್ಣ**

1. ಅ) ವಾಣಿಜ್ಯ ಪತ್ರಗಳು

ಆ) ವರದಿಗಳು

2. ಮಾರುಕಟ್ಟೆ ನಿರ್ವಹಣೆಯಲ್ಲಿ ಜಾಹಿರಾತುಗಳ ಪಾತ್ರ
3. ಉದ್ಯಮ ಲೋಕದ ಸಾಧಕರು (ಜೆ.ಆರ್,ಡಿ ಟಾಟಾ, ಡಾ.ವರ್ಗಿಸ್ ಕುರಿಯನ್, ಎನ್.ಆರ್.ನಾರಾಯಣ ಮೂರ್ತಿ, ಏಕ್ತಾ ಕಪೂರ್ ಮತ್ತು ರೌನಕ್ ಸಿಂಗ್ )

**ಪ್ರಧಾನ ಸಂಪಾದಕರು**
ಡಾ. ವಿಜಯಕುಮಾರಿ ಎಸ್. ಕರಿಕಲ್

**ಸಂಪಾದಕರು**
ಡಾ. ಕೆ. ತಿಮ್ಮಯ್ಯ

**ಸಹ ಸಂಪಾದಕರು**
ಡಾ. ಟಿ.ಕೆ. ಕೆಂಪೇಗೌಡ
ಡಾ. ಎಂ.ಬಿ. ಸುರೇಶ
ಡಾ. ಬಿ.ಪಿ ಆಶಾಕುಮಾರಿ
ಶ್ರೀ ವಿಜಯ ಹನೂರು

**ಬಿ.ಬಿ.ಎ**

**ಸೆಮಿಸ್ಟರ್ – 1**

| Course Title: ಬಿ.ಬಿ.ಎ – ಕನ್ನಡ ಭಾಷಾ ಪಠ್ಯ ವ್ಯವಹಾರ ನಿರ್ವಹಣ ಕನ್ನಡ | |
|---|---|
| Total Contact Hours: 52 to 56 | Course Credits : 03 |
| Formative Assessment Marks : 40(CIE) | Duration of ESA/EXAM: 3 hours |
| Model Syllabus Authors: Multiple Authors | Summative Assessment Marks: 60 (SEE) |
| | |
| ವಿವರಗಳು | ಬೋಧನಾ ಅವದಿ |
| ಘಟಕ–1 ಕನ್ನಡ ನಾಡು– ನುಡಿ ಚಿಂತನೆ | 13/14 |
| ಘಟಕ–2 ಆಧುನಿಕತೆ | 13/14 |
| ಘಟಕ–3 ಕುಟುಂಬ | 13/14 |
| ಘಟಕ–4 ಸಂಕೀರ್ಣ | 13/14 |

**ಘಟಕ – 1 ಕನ್ನಡ ನಾಡು–ನುಡಿ ಚಿಂತನೆ**

ಪದವಿ ಪಠ್ಯಗಳಲ್ಲಿ ಕನ್ನಡ ನಾಡು–ನುಡಿ ಚಿಂತನೆಗಳು ಮತ್ತು ಕನ್ನಡ ಭಾಷಾ ಸಂಸ್ಕೃತಿಗೆ ಇರುವ ಬಹುಮುಖಿ ಆಯಾಮಗಳನ್ನು ಪರಿಗಣಿಸಿ ಘಟಕ–1 ಅನ್ನು ರೂಪಿಸಲಾಗಿದೆ. ರಾಷ್ಟ್ರಕವಿ ಕುವೆಂಪು ಅವರ ಕನ್ನಡ ಡಿಂಡಿಮ– ಮುನ್ನುಡಿ ಲೇಖನ. ಡಾ.ಹಾ.ಮಾ.ನಾಯಕ ರವರ 'ಕನ್ನಡ ಕಟ್ಟುವ ಕೆಲಸ' ಲೇಖನ ಮತ್ತು ಹುಯಿಳಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' – ಕವನವನ್ನು ಅಧ್ಯಯನಕ್ಕೆ ಇಡಲಾಗಿದೆ. ಇದರಿಂದ ಕನ್ನಡ ನಾಡು–ನುಡಿಯ ಬಗ್ಗೆ ಹೆಚ್ಚಿನ ಅಭಿಮಾನ ಮೂಡುವುದಲ್ಲದೇ ಕನ್ನಡದ ಹಿರಿಮೆ–ಗರಿಮೆಯನ್ನು ಪರಿಚಯಿಸಲಾಗುತ್ತದೆ.

**ಘಟಕ – 2 ಆಧುನಿಕತೆ**

ಕಳೆದ ಶತಮಾನದಿಂದ ಜಗತ್ತು ಆಧುನಿಕತೆಯ ಜೊತೆಗೆ ಮುಖಾಮುಖಿಯನ್ನು ನಡೆಸುತ್ತಲೇ ಬಂದಿದೆ. ಆಧುನಿಕತೆಯು ಆಕರ್ಷಣೆಯೂ ಹೌದು. ಬದಲಾವಣೆಯ ಪ್ರಕ್ರಿಯೆಯೂ ಹೌದು. ಸವಾಲೂ ಹೌದು, ದುರಂತವೂ ಹೌದು. ಮುಖ್ಯವಾಗಿ ಮೂರನೆಯ ಜಗತ್ತಿನ ರಾಷ್ಟ್ರಗಳ ವಿಷಯದಲ್ಲಿ ಇದು ಇನ್ನೂ ಹೆಚ್ಚು ಸಂಕೀರ್ಣವಾಗಿದೆ. ಆಧುನಿಕತೆಯು ಸಾಮಾಜಿಕ ತರತಮಗಳನ್ನು ನಿವಾರಿಸಿಕೊಳ್ಳಲು ಇರುವ ಪರಿಹಾರ ಮಾರ್ಗ ಎಂದೇ ಭಾವಿಸಲಾಗಿತ್ತು. ಕಾಲಕ್ರಮೇಣ ಆಧುನಿಕ ವಿದ್ಯಮಾನಗಳು ಶ್ರೇಣಿಕರಣವನ್ನು ಇನ್ನೂ ಬಲಪಡಿಸುತ್ತಿವೆ ಎನ್ನುವ ಸತ್ಯ ಈಗ ಬಯಲಾಗುತ್ತಿದೆ. ಆಧುನಿಕತೆಯ ಪರ ಮತ್ತು ವಿರೋಧದ ಆಂಶಗಳಿರುವ ಪಠ್ಯಗಳನ್ನು ಸಂಯೋಜಿಸಿದರೆ ವಿದ್ಯಾರ್ಥಿಗಳಿಗೆ ಆಧುನಿಕತೆಯ ಸ್ಪಷ್ಟ ಚಿತ್ರಣ ಸಿಗುತ್ತದೆ.

**ಘಟಕ – 3 : ಕುಟುಂಬ**

